ANANTHKUMAR PRATISHTHANA

# ಅನಂತಪಥ

ಪುಟ 9
ಜಿರಲೆ ಮಲ್ಲಮ್ಮ
ಅಪೂರ್ವ ಮಹಿಳೆ



ಸಂಪುಟ - 6 | ಜುಲೈ - 2025 | ಸಂಚಿಕೆ - 61

# ಹಸಿರು ಭಾನುವಾರವೆಂಬ ಪರಿಸರ ಜನಾಂದೋಲನ

## ಪ್ರಕೃತಿ ರಕ್ಷಣೆಯ ಅನಂತಕುಮಾರ್ ಅವರ ಮಹಾದಾಶಾಯಕ್ಕೆ ಹೊಸರೆಕ್ಕೆ

### ರಾಮರಾಜ್ಯದ ಪವಿತ್ರಭೂಮಿ ಅಯೋಧ್ಯೆಯಲ್ಲಿ 500ನೇ ಹಸಿರು ಭಾನುವಾರ



ಪರಿಸರ ರಕ್ಷಣೆಯ ನಿಟ್ಟಿನಲ್ಲಿ ಬೋಧನೆ ಮಾಡುವುದಕ್ಕಿಂತ ಪ್ರಾಯೋಗಿಕ ಕೆಲಸಗಳೇ ಹೆಚ್ಚು ಪರಿಣಾಮಕಾರಿ ಎಂದು ಬಲವಾಗಿ ನಂಬಿ, ಈ ತತ್ತ್ವದಡಿ ನಡೆದವರು ಮಾಜಿ ಕೇಂದ್ರ ಸಚಿವ ಅನಂತಕುಮಾರ್. ಹಾಗಾಗಿಯೇ, ನಮ್ಮ ಸುತ್ತಮುತ್ತಲ ಪರಿಸರದಲ್ಲಿ ಹಸಿರು ಬೆಳೆಸಲು ಗಿಡಗಳನ್ನು ನೆಡುವ ಸಾರ್ಥಕ ಕೆಲಸವನ್ನು ಆರಂಭಿಸಿಯೇ ಬಿಟ್ಟರು. ಅನಂತಕುಮಾರ್ ಅವರ ಭೌತಿಕ ಅಗಲಿಕೆಯ ಬಳಿಕವೂ ಅವರ ಸ್ಮರಣಾರ್ಥ ಈ ಕೆಲಸ ಮತ್ತಷ್ಟು ಪರಿಣಾಮಕಾರಿಯಾಗಿ ನಡೆಯುತ್ತಿದ್ದು, `ಹಸಿರು ಭಾನುವಾರ' ಎಂಬ ನವ ಪರಿಸರ ಆಂದೋಲನ ಇದೇ 27ಕ್ಕೆ 500ನೇ ವಾರದ ಸಂಭ್ರಮ ಮತ್ತು ಸಾರ್ಥಕತೆಗೆ ಸಾಕ್ಷಿಯಾಗುತ್ತಿದೆ. ತನ್ನಿಮಿತ್ತ ಈ ಲೇಖನ.

ಯಾವುದೇ ಮಹತ್ವದ ಸಂದರ್ಭವನ್ನು ಒಳ್ಳೆಯ ಕೆಲಸಗಳಿಂದ ಸ್ಮರಣೀಯವಾಗಿಸಬೇಕು. ಹೊಸ ವರ್ಷ ಬಂದಾಗಲೆಲ್ಲ ಕೆಲವರು ಹೊಸ ಸಂಕಲ್ಪ ತಳೆಯುತ್ತಾರೆ, ಆದರೆ ಹೊಸ ವರ್ಷದ ಮೊದಲ ತಿಂಗಳ ಕ್ಯಾಲೆಂಡರ್ ತಿರುವಿ ಹಾಕುವಷ್ಟರಲ್ಲಿ ಆ ಸಂಕಲ್ಪಗಳು ಮರೆತೇ ಹೋಗಿರುತ್ತವೆ. ಆದರೆ, ದೂರದೃಷ್ಟಿಯುಳ್ಳ ನಾಯಕರು ಮಾತ್ರ ಬದಲಾವಣೆಗೆ ತಾವು ಇರಿಸಿದ ಸಣ್ಣ ಸಣ್ಣ ಹೆಜ್ಜೆಯಲ್ಲೂ ಪರಿವರ್ತನೆಯ ಬೆಳಕು ಕಾಣುವಂತೆ ಮಾಡುತ್ತಾರೆ. ಇದಕ್ಕೆ ಸ್ಪಷ್ಟ ನಿದರ್ಶನ ಮಾಜಿ ಕೇಂದ್ರ ಸಚಿವರು ಮತ್ತು ಭಾರತೀಯ ಜನತಾ ಪಕ್ಷದ ರಾಷ್ಟ್ರೀಯ ನಾಯಕರರೂ ಆಗಿದ್ದ ಅನಂತಕುಮಾರ್ ಅವರು.

ಅದು 2000ನೇ ಇಸ್ವಿಯ ಸಂದರ್ಭ. ಈ ಸಂದರ್ಭದಲ್ಲಿ ಅನಂತಕುಮಾರ್ ಅವರು ಕೇಂದ್ರದಲ್ಲಿ ಯುವಜನ ಮತ್ತು ಸಂಸ್ಕೃತಿ ಖಾತೆಯ ಸಚಿವರಾಗಿದ್ದರು. ಭಾರತದ ಪುರಾತನ ಶ್ರೇಷ್ಠ ಸಂಸ್ಕೃತಿಯನ್ನು ಮತ್ತು ನೈತಿಕ ನೆಲೆಗಟ್ಟನ್ನು ಮುಂದೆ ತೆಗೆದುಕೊಂಡು ಹೋಗಲು ಅಟಲ್ ಬಿಹಾರಿ ವಾಜಪೇಯಿ ಸರ್ಕಾರದಲ್ಲಿ ಸಂಸ್ಕೃತಿ ಖಾತೆಯ ಮಹತ್ವದ ಹೊಣೆಗಾರಿಕೆಯನ್ನು ವಹಿಸಿಕೊಂಡಿದ್ದರು. 2000ನೇ ಇಸ್ವಿ ಅದು ಬರೀ ಹೊಸ ವರ್ಷವಲ್ಲ. ಹೊಸ ಶತಮಾನವಷ್ಟೇ ಅಲ್ಲ. ಸಹಸ್ರಮಾನವೇ (ಸಾವಿರ ವರ್ಷಗಳು) ಅರಳುವ ಹೊತ್ತು. ಹಾಗಾಗಿಯೇ ಹೊಸ ಕನಸುಗಳು, ನಿರೀಕ್ಷೆಗಳು ಸಹಜವೇ. ಇಂಥ ಸುಸಂದರ್ಭವನ್ನು ಮೋಜು ಅಥವಾ ಇತರ ಸಂತೋಷಕೂಟಗಳಿಗೆ ಸೀಮಿತವಾಗಿಸದೆ, ತಾಯಿ ಭಾರತಿಯ ಸೇವೆಗೆ ಸಮರ್ಪಿಸಬೇಕು, ಭಾರತವನ್ನು ವಿಶ್ವಗುರುವಾಗಿಸಬೇಕು ಎಂಬ ಸದಾಶಾಯದಿಂದ ಅನಂತಕುಮಾರ್ ಅವರು ಹೊಸವರ್ಷಕ್ಕೆ ಸಾಮೂಹಿಕವಾಗಿ ಒಂದಿಷ್ಟು ಸಂಕಲ್ಪಗಳನ್ನು ಕೈಗೊಳ್ಳುವುದು ರೂಢಿಯಾಗಿತ್ತು.

ಆ ಸಂಕಲ್ಪಗಳೆಲ್ಲ ಸಮಾಜಮುಖಿ, ರಾಷ್ಟ್ರಮುಖಿ ಮತ್ತು ಪರಿಸರಮುಖಿ ಎಂಬುದು ವಿಶೇಷ. ಹೊಸ ಸಹಸ್ರಮಾನದ ಸ್ವಾಗತವು ವಂದೇಮಾತರಂ ಮತ್ತು ಪ್ರತಿಜ್ಞೆಯ ಮೂಲಕ ಆಗಬೇಕು ಎಂಬುದು ಅವರ ಸದಾಶಯವಾಗಿತ್ತು. ಈ ಕಾರ್ಯಕ್ರಮ ರಾಷ್ಟ್ರದ ರಾಜಧಾನಿ ದೆಹಲಿಯಲ್ಲಿ ಆರಂಭಗೊಂಡರೂ, ಎರಡು-ಮೂರು ವರ್ಷಗಳ ನಂತರ ರಾಜ್ಯದ ರಾಜಧಾನಿ ಬೆಂಗಳೂರಿನಲ್ಲಿ ಅದನ್ನು ಮುಂದುವರಿಸಿಕೊಂಡು ಬರಲಾಯಿತು. ಶೂನ್ಯತ್ಯಾಜ್ಯ ಅಡುಗೆಮನೆ, ನೀರನ್ನು ಉಳಿಸುವ ನಿಟ್ಟಿನಲ್ಲಿ ಸುಜಲಾಂ, ಸುಫಲಾಂ ಹೀಗೆ ಹಲವು ವೈಯಕ್ತಿಕ ಮತ್ತು ಸಾಮೂಹಿಕ ಸಂಕಲ್ಪಗಳು ಈ ಸಂದರ್ಭದಲ್ಲಿ ಗರಿಗೆದರಿ, ಪರಿವರ್ತನೆಗೆ ಸಾಕ್ಷಿಯಾಗಿವೆ. ಹಾಗೆಯೇ ಪರಿಸರವನ್ನು ಉಳಿಸಿ, ಬೆಳೆಸುವ ನಿಟ್ಟಿನಲ್ಲಿ ಹಸಿರು ಸಂಕಲ್ಪ.



**ಹಸಿರು ಭಾನುವಾರದ ಆರಂಭ**

2016ರ ಜನವರಿಯಲ್ಲಿ (ಆಂಗ್ಲ ಹೊಸ ವರ್ಷದ ಸಂದರ್ಭ) ಅದಮ್ಯ ಚೇತನ ಸಂಸ್ಥೆಯಿಂದ ಒಂದು ವಿಶೇಷ ಸಂಕಲ್ಪ ಮೈದಳೆಯಿತು. ಇಡೀ ವರ್ಷ ಭಾನುವಾರದಂದು ಗಿಡಗಳನ್ನು ನೆಡುತ್ತೇವೆ ಎಂಬ ಸಂಕಲ್ಪಕ್ಕೆ 'ಹಸಿರು ಭಾನುವಾರ' ಎಂಬ ಸುಂದರ ಹಾಗೂ ಸಾರ್ಥಕ ಶೀರ್ಷಿಕೆ. ಮುಂದಿನ ವರ್ಷದಿಂದ ಹೊಸ ಸಂಕಲ್ಪಗಳನ್ನು ತೆಗೆದುಕೊಂಡರೂ, ಈ ಹಳೆಯ ಸಂಕಲ್ಪವನ್ನು ಬಿಡಲು ಮನಸ್ಸಾಗಲಿಲ್ಲ. ಏಕೆಂದರೆ ಹಸಿರು ಹರಡುವ ಸಂಕಲ್ಪ ಅದಾಗಲೇ ಜನರ ಮನಸ್ಸಿನಲ್ಲಿ ಹಸಿರಿನ ಸಿರಿಯಾಗಿ ಹರಡಿಕೊಂಡಿತ್ತು. ಪ್ರತಿ ಭಾನುವಾರ ಮರಗಳನ್ನು ನೆಡುವುದು ಮತ್ತು ದೈನಂದಿನ ಜೀವನದ ಭಾಗವಾಗಿ ಪ್ರಕೃತಿಯನ್ನು ಸಂರಕ್ಷಿಸುವುದು ಈ ಅಭಿಯಾನದ ಮುಖ್ಯ ಉದ್ದೇಶ. ನೋಡುನೋಡುತ್ತಲೇ ಯಶಸ್ವಿಯಾಗಿ ಒಂದು ವರ್ಷ ಪೂರೈಸಿತು. ಮಾತ್ರವಲ್ಲ, ಭಾನುವಾರವನ್ನು ಹೀಗೆ ವಿಭಿನ್ನವಾಗಿ ಮತ್ತು ಸಂತೃಪ್ತಿಯ ಕೆಲಸದಲ್ಲಿ ತೊಡಗಿಸುವ ಅನುಭವವೇ ಬೆಂಗಳೂರಿಗರಿಗೆ ಹೊಸ ಪುಳಕ ನೀಡಿತು.

ಪುಟ 4 ರಲ್ಲಿ

## ಅಭಿನಂದನೆಗಳು




**"ಅದಮ್ಯ ಚೇತನ ಸಂಸ್ಥೆಯು ಈ ವರ್ಷದ ಪದ್ಮಶ್ರೀ ಪ್ರಶಸ್ತಿ ಗೌರವಕ್ಕೆ ಪಾತ್ರರಾದ ಡಾ. ವಿಜಯಲಕ್ಷ್ಮಿ ದೇಶಮಾನೆಯವರನ್ನು ಅಭಿನಂದಿಸಿತು.**

ಪುಟ 5 ರಲ್ಲಿ ಮುಂದುವರಿದಿದೆ



# ಪತ್ರಕರ್ತರಿಗೆ ಹೊಸ ದೃಷ್ಟಿಕೋನ ಒದಗಿಸಿದ ತರಬೇತಿ ಕಾರ್ಯಾಗಾರ – ಅದಮ್ಯ ಚೇತನ ಸಂಸ್ಥೆಯಲ್ಲಿ ಪರಿಸರಪರ ಮಾದರಿಯ ಬದುಕು – ಅನುಭವಾಧಾರಿತ ಅಧ್ಯಯನ



ಹವಾಮಾನ ಬದಲಾವಣೆ, ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಕುರಿತು ಜನರಲ್ಲಿ ಜಾಗೃತಿ ಮೂಡಿಸುವಲ್ಲಿ ಮಾಧ್ಯಮದ ಪಾತ್ರ ಅತ್ಯಂತ ಮಹತ್ವದ್ದಾಗಿದೆ. ಈ ನಿಟ್ಟಿನಲ್ಲಿ, ಕರ್ನಾಟಕ ಸರ್ಕಾರದ ಪರಿಸರ ನಿರ್ವಹಣೆ ಮತ್ತು ನೀತಿ ಸಂಶೋಧನಾ ಸಂಸ್ಥೆ (EMPRI), ಭಾರತ ಸರ್ಕಾರದ ಪರಿಸರ, ಅರಣ್ಯ ಮತ್ತು ಹವಾಮಾನ ಬದಲಾವಣೆ ಮಂತ್ರಾಲಯದ (MoEF&CC) ಸಹಯೋಗದಲ್ಲಿ "Crafting Climate Narrative: A Workshop on Sustainable Development and Responsible Journalism" ಎಂಬ ಮೂರು ದಿನಗಳ ತರಬೇತಿ ಕಾರ್ಯಾಗಾರವನ್ನು ಜುಲೈ 15 ರಿಂದ 17ರವರೆಗೆ ಆಯೋಜಿಸಿತ್ತು. ಕರ್ನಾಟಕ ಮಾಧ್ಯಮ ಅಕಾಡೆಮಿಯಿಂದ ಆಯ್ಕೆಯಾದ 30 ಯುವ ಪತ್ರಕರ್ತರು ಇದರಲ್ಲಿ ಭಾಗವಹಿಸಿದ್ದರು.

ಹವಾಮಾನ ವೈಜ್ಞಾನಿಕ ಅಂಶಗಳು, ಸುಸ್ಥಿರತೆಯ ತತ್ವಗಳು ಮತ್ತು ಪರಿಸರ ಪತ್ರಿಕೋದ್ಯಮದ ಬಗ್ಗೆ ಪತ್ರಕರ್ತರಿಗೆ ಸಮಗ್ರ ತಿಳುವಳಿಕೆ ನೀಡುವುದು, ನೆಲಮಟ್ಟದ ಪರಿಸರ ಅಭ್ಯಾಸಗಳನ್ನು ಸಾರ್ವಜನಿಕ ಸಂವಹನಕ್ಕೆ ಅನುಗುಣವಾದ ಕಥಾನಕಗಳಾಗಿ ರೂಪಿಸುವ ಕೌಶಲ್ಯ ಬೆಳೆಸುವುದು ಮತ್ತು ಜವಾಬ್ದಾರಿಯುತ ವರದಿ ತಂತ್ರಗಳನ್ನು ಅಭಿವೃದ್ಧಿಪಡಿಸುವುದು ಈ ಕಾರ್ಯಾಗಾರದ ಪ್ರಮುಖ ಗುರಿಗಳಾಗಿದ್ದವು.

**ಅದಮ್ಯ ಚೇತನ ಸಂಸ್ಥೆಯಲ್ಲಿ ಕ್ಷೇತ್ರ ಅಧ್ಯಯನ:**

ಕಾರ್ಯಾಗಾರದ ಎರಡನೇ ದಿನ, ಜುಲೈ 16ರಂದು ಪತ್ರಕರ್ತರು ಅದಮ್ಯ ಚೇತನ ಸಂಸ್ಥೆಗೆ ಭೇಟಿ ನೀಡಿದರು. ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರ ನೇತೃತ್ವದಲ್ಲಿ ಕಾರ್ಯನಿರ್ವಹಿಸುತ್ತಿರುವ ಅದಮ್ಯ ಚೇತನ ಸಂಸ್ಥೆಯು ಶೂನ್ಯ ತ್ಯಾಜ್ಯ ಅಡುಗೆಮನೆ, ಜೈವಿಕ ಇಂಧನ ಉತ್ಪಾದನೆ, ಮರುಬಳಕೆಯ ನೀರಿನ ವ್ಯವಸ್ಥೆ, ಪ್ಲಾಸ್ಟಿಕ್ ನಿಷೇಧ ತಂತ್ರಗಳು ಮತ್ತು ಗಿಡ ನೆಡುವ ಅಭಿಯಾನದ ಮೂಲಕ ಸಮುದಾಯ ಕೇಂದ್ರಿತ ಪರಿಸರಸ್ನೇಹಿ ಜೀವನ ಮಾದರಿಗೆ ಹೆಸರಾಗಿದೆ. ಈ ಭೇಟಿಯು ಪತ್ರಕರ್ತರಿಗೆ ಪರಿಸರ ಸಂರಕ್ಷಣೆಯ ಪ್ರಾಯೋಗಿಕ ಕಲಿಕೆಗೆ ವಿಶಿಷ್ಟ ಅನುಭವ ನೀಡಿತು.

ಈ ಕಾರ್ಯಾಗಾರದ ಸಮನ್ವಯದ ಜವಾಬ್ದಾರಿಯನ್ನು ನಿವೃತ್ತ ಪ್ರಾದೇಶಿಕ ನಿರ್ದೇಶಕರಾಗಿದ್ದ ಶ್ರೀ ಎಸ್. ಸುರೇಶ್ (Central Pollution Control Board–CPCB) ನಿರ್ವಹಿಸಿದರು. ತರಬೇತಿಯ ವಿವಿಧ ಹಂತಗಳಲ್ಲಿ ಅವರು ತಮ್ಮ ಅನುಭವದ ಆಧಾರದ ಮೇಲೆ ಸ್ಪಷ್ಟವಾದ ಮಾರ್ಗದರ್ಶನವನ್ನು ಒದಗಿಸಿದರು. ಕಾರ್ಯಕ್ರಮದ ಕುರಿತು ಮಾತಾನಾಡುತ್ತಾ ಅದಮ್ಯ ಚೇತನದಲ್ಲಿ ಪರಿಸರ ಸಂರಕ್ಷಣೆಯು ಘೋಷವಾಕ್ಯವಲ್ಲ – ಅದು ಜೀವಂತ ಸಂಸ್ಕಾರವಾಗಿದೆ. ಶುದ್ಧ ಕಾರ್ಯಶೈಲಿ ಮತ್ತು ಮೌಲ್ಯಾಧಾರಿತ ನಡೆಗಳು ಮುಂದಿನ ಪೀಳಿಗೆಗೆ ಶ್ರೇಷ್ಠ ಮಾದರಿಯಾಗಿದೆ. ಇಂತಹ ಕ್ಷೇತ್ರ ಅನುಭವಗಳು ಪತ್ರಕರ್ತರಿಗೆ ನೈತಿಕ ದೃಷ್ಟಿಕೋನ ಮತ್ತು ಜವಾಬ್ದಾರಿಯುತ ವರದಿಗೆ ಹಾದಿ ತೋರಿಸುತ್ತವೆ. ಎಂದು ಸಂಸ್ಥೆಯ ಶೂನ್ಯ ತ್ಯಾಜ್ಯ ಅಡುಗೆಮನೆ ಮತ್ತು ಪರಿಸರ ಸ್ನೇಹಿ ಉಪಕ್ರಮಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ತರಬೇತಿ ಕಾರ್ಯಾಗಾರವು ಯುವ ಪತ್ರಕರ್ತರಿಗೆ ಪರಿಸರ ಪತ್ರಿಕೋದ್ಯಮದಲ್ಲಿ ಶ್ರದ್ಧೆ, ಸಮರ್ಥತೆ ಮತ್ತು ನೈತಿಕತೆಯನ್ನು ತರುವ ಭರವಸೆ ನೀಡಿದೆ.




ಶ್ರದ್ಧೆಯ ಶಿಲ್ಪ; ಪ್ರತಿ ಮಂಗಳವಾರ ಮುಂಜಾನೆ 6:35ಕ್ಕೆ ಮತ್ತು ಸಂಜೆ 6:10ಕ್ಕೆ ಮೈಸೂರು ಆಕಾಶವಾಣಿಯಿಂದ ಬಿತ್ತರಗೊಳ್ಳುತ್ತಿರುವ ಶ್ರದ್ಧೆಯಶಿಲ್ಪ ಬಾನುಲಿ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆಯು ಪ್ರಾಯೋಜಿಸುತ್ತಿದೆ. ಶ್ರೀ ಟಿ. ಎಸ್. ಗೋಪಾಲ್ ಪ್ರಸ್ತುತ ಪಡಿಸುತ್ತಿರುವ ಈ ಕಾರ್ಯಕ್ರಮವು ಆಕಾಶವಾಣಿಯ ಜನಪ್ರಿಯ ಕಾರ್ಯಕ್ರಮವಾಗಿದೆ. ಕರ್ನಾಟಕ ದೇವಾಲಯಗಳನ್ನು ಪರಿಚಯಿಸುವ ಈ ಸರಣಿಯಲ್ಲಿ ಈ ತಿಂಗಳು ಚಿಕ್ಕಮಗಳೂರು ಜಿಲ್ಲೆಯ ಮರಲೆಯ ದೇವಾಲಯ, ವಿಜಯಪುರ ಜಿಲ್ಲೆಯ ಉಪ್ಪಲದಿನ್ನಿಯ ದೇವಾಲಯ, ಹಾವೇರಿ ಜಿಲ್ಲೆಯ ಕಲಕೇರಿಯ ದೇವಾಲಯ, ವಿಜಯಪುರ ಜಿಲ್ಲೆಯ ಕಡ್ಲೇವಾಡದ ಸೋಮನಾಥ ದೇವಾಲಯವನ್ನು ಪರಿಚಯಿಸಲಾಯಿತು.












ಅನಂತಯಾನ
ನಿರೂಪಣೆ : ಟಿ.ಎಸ್. ಗೋಪಾಲ್

# ಬಿಡುಗಡೆಯ ಹಿಂದುಮುಂದು

## ಅಧ್ಯಾಯ-33

ತುರ್ತುಪರಿಸ್ಥಿತಿಯ ಆ ದಿನಗಳಲ್ಲಿ ದೇಶವನ್ನು ಸಂರಕ್ಷಿಸಲು ರಕ್ತಕ್ರಾಂತಿಯೊಂದೇ ಪರಿಹಾರವೇನೋ ಎಂದು ಅನಂತಕುಮಾರ, ವಿಷ್ಣುಕಾಂತ ಚಟಪಲ್ಲಿ ಮೊದಲಾದವರು ಮಾತನಾಡಿಕೊಳ್ಳುತ್ತಿದ್ದುದುಂಟು. ಸುಭಾಷ್ ಚಂದ್ರಬೋಸ್, ಭಗತ್ ಸಿಂಗ್, ಚಂದ್ರಶೇಖರ ಆಜಾದ್ ಮೊದಲಾದವರ ಸ್ವಾತಂತ್ರ್ಯ ಹೋರಾಟ ಇವರ ಕಲ್ಪನೆಗೆ ಇಂಬುಕೊಟ್ಟಿತ್ತು. ಆದರೆ ಮೂವತ್ತಾರು ದಿನಗಳ ಸೆರೆವಾಸ ಇವರ ವಿಚಾರವನ್ನು ಬದಲಿಸಿತು. ಸತ್ಯಾಗ್ರಹದಂತಹ ಶಾಂತಮಾರ್ಗದಿಂದಲೇ ಬದಲಾವಣೆ ಸಾಧ್ಯವೆಂದು ಮನವರಿಕೆಯಾಗಿತ್ತು.

ಜನವರಿ 14, 1976. ಸಂಜೆ ಏಳುಗಂಟೆಯ ಹೊತ್ತಿಗೆ ಸೆರೆಮನೆಯಿಂದ ಈ ಸತ್ಯಾಗ್ರಹಿಗಳು ಹೊರಬರುವಾಗ ಅವರನ್ನೇ ನಿರೀಕ್ಷಿಸುತ್ತ ಹೊರಗೆ ನಿಂತಿದ್ದ ಅವರ ತಾಯಿತಂದೆಯರು, ಬಂಧುಗಳು, ಸ್ನೇಹಿತರು, ಸಂಘಟನೆಯವರು ಎಲ್ಲರನ್ನೂ ಪ್ರೀತಿ ಸಂಭ್ರಮಗಳಿಂದ ಬರಮಾಡಿಕೊಂಡರು.



ಸತ್ಯಾಗ್ರಹಿ ಹುಡುಗರು ಸೆರೆಮನೆ ವಾಸದಿಂದ ಬಳಲಿ ಮುಖ ಬಾಡಿಸಿಕೊಂಡಿರಲಿಲ್ಲ; ಅವರೆಲ್ಲರ ಮುಖಗಳಲ್ಲಿ ಹುರುಪಿನ ಉಲ್ಲಾಸವಿತ್ತು; ಏನೋ ಒಂದು ತರಹ ಸಾಧನೆ ಮಾಡಿ ಬಂದಿದ್ದೇವೆ ಎನ್ನುವ ಹೆಮ್ಮೆ ಇತ್ತು. ಅವರೆಲ್ಲ ಸೆರೆಮನೆಯಲ್ಲಿದ್ದ ಸಂದರ್ಭದಲ್ಲಿ "ನಾವು ತಪ್ಪು ಮಾಡಿದ್ದೀವಿ ಅಂತ ಒಪ್ಪಿಕೊಳ್ಳಿ, ಸೆರೆಮನೆಯಿಂದ ಬಿಟ್ಟುಕಳಿಸುತ್ತಾರೆ" ಎಂದು ಎಲ್ಲರೂ ಹೇಳುವಂಥ ಮಾತು ಸಾಮಾನ್ಯವಾಗಿತ್ತು. ಆದರೆ ನ್ಯಾಯಾಲಯ ಈ ಹುಡುಗರಲ್ಲಿ ಅಪರಾಧವನ್ನೇನೂ ಗುರುತಿಸಿರಲಿಲ್ಲ. ಅವರು ತುರ್ತುಪರಿಸ್ಥಿತಿಯನ್ನು ವಿರೋಧ ಮಾಡಿರುವುದಕ್ಕೆ ಡಿಫೆನ್ಸ್ ಆಫ್ ಇಂಡಿಯಾ ರೂಲ್ಸ್ ಪ್ರಕಾರ 30 ದಿವಸ ಶಿಕ್ಷೆ ವಿಧಿಸಿದೆ, ಈಗ ಬಿಡುಗಡೆಗೊಳಿಸಬಹುದು ಎಂದಷ್ಟೇ ಹೇಳಿರುವುದು ಹುಡುಗರಿಗೆಲ್ಲ ಒಂದು ತರಹ ನೆಮ್ಮದಿ ತಂದಿತ್ತು. ಅವರಲ್ಲಿ ಯಾವುದೇ ರೀತಿಯ ಪಾಪಪ್ರಜ್ಞೆ ಇರಲಿಲ್ಲ ಸದ್ಯ, ಪೋಲೀಸರು ತಮ್ಮ ಮಕ್ಕಳನ್ನು ಹೊಡೆದು ಬಡಿದು ಹಿಂಸೆಕೊಟ್ಟಿಲ್ಲವೆಂದು ಎಲ್ಲ ತಾಯಿತಂದೆಯರೂ ಸಂತೋಷಪಟ್ಟುಕೊಂಡರು. ಈಗ ತಮ್ಮ ಮಕ್ಕಳು ಒಳ್ಳೆ ಕೆಲಸಕ್ಕಾಗಿ ಸೆರೆಮನೆಗೆ ಹೋಗಿಬಂದಿದ್ದಾರೆ ಅನ್ನುವಂಥ ಸಂತಸ, ಹೆಮ್ಮೆ ಅವರಲ್ಲೂ ಮೂಡತೊಡಗಿತ್ತು.

ಸೆರೆಮನೆಯಲ್ಲಿ ಸತ್ಕಾರ ಬಯಸುವುದುಂಟೇ? ಅಲ್ಲಿನ ಊಟ ತಿಂಡಿ ಕಳಪೆಯಾಗಿತ್ತೆಂದು ಯಾರೂ ವಿವರಿಸಬೇಕಾಗಿರಲಿಲ್ಲ. ಜನವರಿ 14ರ ರಾತ್ರಿ ತಾಯಂದಿರ ಅಕ್ಕರೆಯಲ್ಲಿ ಹುಡುಗರು ಸಂತೋಷವಾಗಿ ಚೆನ್ನಾಗಿಯೇ ಊಟ ಮಾಡಿದರು. ಮುಂದಿನ ಕೆಲವು ದಿನಗಳು ಹೀಗೆಯೇ ವಿಶ್ರಾಮವಾಗಿಯೇ ಕಳೆದವು.

ತನ್ನ ಮೊಮ್ಮಗ ಜೈಲಿಗೆ ಹೋಗಲು ಆಗಾಗ್ಗೆ ತಮ್ಮ ಮನೆಗೆ ಬರುತ್ತಿದ್ದ ನರಹರಿ ಫಡಕೆಯವರೇ ಕಾರಣ ಎಂದು ಉಮಾಮಹೇಶ್ವರನ ಅಜ್ಜಿ ದೃಢವಾಗಿ ನಂಬಿದ್ದರು. ಮೊಮ್ಮಗ ಬಂಧನದಲ್ಲಿದ್ದಷ್ಟು ಕಾಲ ಅದಕ್ಕೆ ಕಾರಣರಾದವರನ್ನು ತೆಗಳಿದ್ದರಿಂದಷ್ಟೇ ಅಜ್ಜಿಗೆ ಸಮಾಧಾನವಾಗಿರಲಿಲ್ಲ. ಫಡಕೆಯವರು ಎದುರಿಗೆ ಕಾಣುವಾಗ ತರಾಟೆಗೆ ತೆಗೆದುಕೊಳ್ಳುವುದಕ್ಕೂ ಸಿದ್ಧರಾಗಿದ್ದರು. ಆದರೆ, ಗುಂಪಿನ ಉಳಿದವರು ಜೈಲಿನಿಂದ ಬಿಡುಗಡೆಯಾದರೂ, ನರಹರಿ ಫಡಕೆಯವರು ಇನ್ನೂ ಬಂದಿರಲಿಲ್ಲ. ಏಕೆಂದರೆ, ಫಡಕೆಯವರನ್ನು ಮುಂದೆ ಇನ್ನೂ ಒಂದು ವಾರ ಪೋಲೀಸರು ಲಾಕಪ್‌ನಲ್ಲಿ ಇರಿಸಿಕೊಂಡಿದ್ದರು. ಅವರು ಸೆರೆಮನೆಯಿಂದ ಹೊರಬಂದಮೇಲೆ ಉಮಾಮಹೇಶ್ವರನ ಅಜ್ಜಿಯವರಂತೆಯೇ ಇನ್ನೂ ಕೆಲವರ ಅಸ್ತ್ರಪ್ರಯೋಗಗಳಿಗೆ ಗುರಿಯಾಗಬೇಕಾಯಿತೆಂದು ತೋರುತ್ತದೆ!

ಗಿರಿಜಾ ಶಾಸ್ತ್ರಿಯವರೇನೋ ಉಳಿದವರಿಗೆ ಸಮಾಧಾನ ಹೇಳುತ್ತ ಮಕ್ಕಳು ತಪ್ಪೇನೂ ಮಾಡಿಲ್ಲವೆಂದೂ, ಅವರು ಜೈಲಿಗೆ ಹೋದದ್ದಕ್ಕೆ ಬೇಸರಪಡಬೇಕಾಗಿಲ್ಲವೆಂದೂ ಸಮಜಾಯಿಷಿ ಕೊಡುತ್ತಿದ್ದರು. ನಾರಾಯಣ ಶಾಸ್ತ್ರಿಗಳು ಸಾಮಾನ್ಯವಾಗಿ ಪರವಾಗಲಿ, ವಿರೋಧವಾಗಲಿ ಅಭಿಪ್ರಾಯ ವ್ಯಕ್ತಪಡಿಸುವ ಸ್ವಭಾವದವರಲ್ಲ. ಆದರೆ, ಮಗ ಸರ್ಕಾರದ ವಿರುದ್ಧ ಸತ್ಯಾಗ್ರಹ ಹೂಡಿ ಸೆರೆಮನೆಗೆ ಹೋಗಿದ್ದರಿಂದ ಮುಂದೇನಾದೀತೋ ಎಂಬ ಆತಂಕ ಸ್ವಲ್ಪಮಟ್ಟಿಗಾದರೂ ಅವರ ಮನಸ್ಸಿನಲ್ಲಿ ಮೂಡಿರಬಹುದು. ಕಳೆದ ವರುಷ ರೈಲ್ವೆ ಚಳುವಳಿಯ ಕಾಲದಲ್ಲಿ ಜಾರ್ಜ್ ಫರ್ನಾಂಡಿಸ್ ರಂತಹ ಕಾರ್ಮಿಕ ನಾಯಕರು ತಮ್ಮ ಮನೆಗೆ ಬಂದುಹೋದ ತರುವಾಯ ತಾವು - ಒಂದು ತಿಂಗಳ ಅವಧಿಗೇ ಆದರೂ - ಕೆಲಸವನ್ನೇ ಕಳೆದುಕೊಳ್ಳುವ ಅಪಾಯ ಎದುರಾಗಿತ್ತು. ಈಗಲೂ ಹಾಗಾಗಿಬಿಟ್ಟರೆ? ಮಕ್ಕಳು ಇನ್ನೂ ಚಿಕ್ಕವರು; ಪತ್ನಿಗೆ ಅನಾರೋಗ್ಯದ ಸಮಸ್ಯೆ. ಆದರೆ, ಶಾಸ್ತ್ರಿಗಳು ಬದುಕಿನ ಲೌಕಿಕ ಸಂಕಷ್ಟಗಳ ಒತ್ತಡವನ್ನು ತಾಳಿಕೊಂಡು ಮಾನಸಿಕ ಸ್ಥಿಮಿತತೆಯನ್ನು ಕಾಪಾಡಿಕೊಳ್ಳಬಲ್ಲವರು. ಹೀಗಾಗಿ ಅಂದಿನ ಏರುಪೇರುಗಳ ಬಗೆಗೆ ಅವರು ಸ್ಥಿತಪ್ರಜ್ಞರಾಗಿದ್ದರು ಎನ್ನಬಹುದು.

ಗಿರಿಜಾ ಶಾಸ್ತ್ರಿಯವರು ಅನಂತಕುಮಾರ ಮತ್ತಿತರರ ಸತ್ಯಾಗ್ರಹವನ್ನು ಹೇಗೇ ಸಮರ್ಥಿಸಿಕೊಂಡಿದ್ದರೂ ಉಳಿದವರಿಗೇನೂ ಸಮಾಧಾನವಾಗಿರಲಿಲ್ಲ. ಅನಂತಕುಮಾರನಿಗೆ ಇಂಗ್ಲೀಶ್ ಪಾಠ ಹೇಳುತ್ತಿದ್ದ ಶಿಕ್ಷಕ ಶ್ರೀ ಎಸ್.ಎಸ್. ಖಾದರ್ ಅವರಂತೂ ಶಾಸ್ತ್ರಿಯವರ ಮನೆಗೇ ಬಂದು ತಮ್ಮ ಅಸಮಾಧಾನವನ್ನು ವ್ಯಕ್ತಪಡಿಸಿದ್ದರು. ಆಗ, ಗಿರಿಜಾ ಶಾಸ್ತ್ರಿಯವರು ದೇಶ ಮೊದಲು, ಸಮಾಜ ಉಳಿಸೋಣ, ಆಮೇಲೆ ನಾವು ಉಳಿದೇ ಉಳಿಯುತ್ತೇವೆ, ಅನಂತಕುಮಾರ ದೇಶಕ್ಕೋಸ್ಕರವಾಗಿ ಸತ್ಯಾಗ್ರಹಕ್ಕೆ ಧುಮುಕುವ ನಿರ್ಧಾರ ತೆಗೆದುಕೊಂಡಿದ್ದಾನೆ, ನೀವು ಏನೂ ಯೋಚನೆ ಮಾಡಬೇಡಿ ಎಂದು ಸಮರ್ಥಿಸಿಕೊಂಡರು. ಆದರೆ ಖಾದರ್ ಅವರಿಗೇನೂ ಸಮಾಧಾನವಾದಂತೆ ಕಾಣಲಿಲ್ಲ. ನಿಮ್ಮ ಮಗನ ಭವಿಷ್ಯದಲ್ಲಿ ಕಪ್ಪು ಚುಕ್ಕಿ ಇಟ್ಟುಬಿಟ್ಟಿರಲ್ಲ ಎಂದೇ ಬೇಸರ ಪಟ್ಟುಕೊಂಡು ಹೋಗಿದ್ದರು.

ಅನಂತಕುಮಾರರ ಬಂಧನದ ಸುದ್ದಿ ಎಂಟಿಎಸ್ ಕಾಲೊನಿಯ ಮನೆಗಳಿಗೆ ತಲುಪಿದಾಗಲೇ ವಿಭಿನ್ನ ಪ್ರತಿಕ್ರಿಯೆಗಳು ವ್ಯಕ್ತವಾಗಿದ್ದವು. ಮಕ್ಬೂಲನ ಮನೆಗೆ ಬರುತ್ತಿದ್ದ ಪರಿಚಯದವರು ಆತನ ತಂದೆತಾಯಿಗಳೊಡನೆ , "ನೋಡಿ ನಿಮ್ಮ ಮಗ ಯಾವಾಗಲೂ ಆ ಅನಂತಕುಮಾರನ ಜೊತೆಗೆ ಓಡಾಡುತ್ತಾನಲ್ಲ, ಅವನನ್ನು ಜೈಲಿಗೆ ಹಾಕಿದ್ದಾರಂತೆ. ಮಕ್ಬೂಲ ಅವನ ಸಹವಾಸಮಾಡದಂತೆ ನೋಡಿಕೊಳ್ಳಿ" ಎನ್ನತೊಡಗಿದರು. ಮಕ್ಬೂಲನ ತಂದೆಯಾಗಲಿ ತಾಯಿಯಾಗಲಿ ಈ ಬಗ್ಗೆ ಪ್ರತಿಕ್ರಯಿಸಲಿಲ್ಲ; ಮಕ್ಬೂಲನಿಗೆ ಏನನ್ನೂ ಹೇಳಲೂ ಇಲ್ಲ. ಅನಂತ ನಲವತ್ತು ದಿನಗಳ ಸೆರೆವಾಸದ ನಂತರ ಹಿಂತಿರುಗಿದ ಮೇಲೆ ಅವರ ದಿನಚರಿ ಎಂದಿನಂತೆಯೇ ಇತ್ತು.

ಮಕ್ಬೂಲ ಪಟೇಲ್ ಮತ್ತು ಅವರ ಮನೆಯವರೊಡನೆ ಅನಂತಕುಮಾರರ ವಿಶ್ವಾಸ ಮುಂದುವರಿದುದು ಹಲವರಿಗೆ ಸಹಿಸಲಿಲ್ಲ. "ಜೈಲಿಗೆ ಹೋಗಿಬಂದನಲ್ಲ ಆ ಹುಡುಗನ ಜೊತೆ ನಿಮ್ಮ ಮಗ ಓಡಾಡುವುದನ್ನು ನೋಡಿದೆ. ನಿಮ್ಮ ಹುಡುಗನಿಗೆ ಬುದ್ದಿ ಹೇಳಿ, ಇದೆಲ್ಲ ಸರಿಯಿಲ್ಲ ಎನ್ನತೊಡಗಿದರು. ಅಂಥವರ ಟೀಕೆಗೆ ಪ್ರತಿಕ್ರಿಯೆ ತೋರದೆ ಮೌನ ತಾಳಿದ ಮಕ್ಬೂಲನ ತಾಯಿ ತನ್ನ ಮಗ ಮತ್ತು ಅನಂತನ ಸ್ನೇಹದ ಬಗೆಗೆ ಎಂದೂ ಒಡಕುಮಾತು ಹೇಳಲಿಲ್ಲ. ಅನಂತ ಚಿಕ್ಕ ಹುಡುಗನಾಗಿದ್ದಾಗಲೇ ಅವನಲ್ಲಿ ಮಂತ್ರಿಯಾಗುವ ಅರ್ಹತೆಯನ್ನು ಕಂಡ ಆ ತಾಯಿಯ ಮನಸ್ಸಿನ ವೈಶಾಲ್ಯವಾಗಲಿ ಗುಣಗ್ರಾಹಿ ಸೂಕ್ಷ್ಮತೆಯಾಗಲಿ ಲೌಕಿಕ ಟೀಕಾಪರರಿಗೆ ಅರಿವಾದೀತು ಹೇಗೆ?

ಅನಂತಕುಮಾರ್ ಜೈಲುವಾಸ ಮುಗಿಸಿಕೊಂಡು ಬರುವ ವೇಳೆಗೆ ವಾಮನಾಚಾರ್ಯರ ಮನೆಯ ಕಾರ್ಯಾಲಯ ಬದಲಾಗಿತ್ತು. ಅನಂತಕುಮಾರರ ಉತ್ಸಾಹ ಕಿಂಚಿತ್ತೂ ಕುಂದದಿರುವುದನ್ನು ಕಾಣುವಾಗ ವಾಮನಾಚಾರ್ಯರಿಗೆ ಅಚ್ಚರಿ! ಸೆರೆವಾಸದ ಸಂಕಷ್ಟವಾಗಲಿ, ಮುಂದೆ ಇನ್ಯಾವ ಕಷ್ಟನಷ್ಟಗಳನ್ನು ಎದುರಿಸಬೇಕಾಗುತ್ತದೆಯೋ ಎಂಬ ಆತಂಕವಾಗಲಿ ಅನಂತಕುಮಾರನ ಮೇಲೆ ಯಾವ ಪ್ರಭಾವವನ್ನೂ ಬೀರಿದಂತೆಯೇ ಇರಲಿಲ್ಲ. ಇಷ್ಟೆಲ್ಲ ಆದಮೇಲೂ ಈ ಹುಡುಗನಿಗೆ ಹೆದರಿಕೆಯೇ ಇಲ್ಲವಲ್ಲ ಎಂದು ವಾಮನಾಚಾರ್ಯರಿಗೆ ಅನ್ನಿಸುತ್ತಿತ್ತು.

ಹಾಗೆ ನೋಡಿದರೆ ಅನಂತಕುಮಾರನ ಮನೆಯಲ್ಲಿ ಸಾರ್ವಜನಿಕ ನಾಯಕರೆನ್ನಿಸಿಕೊಂಡ ಧುರೀಣರು ಯಾರೂ ಆ ಮೊದಲು ಇರಲಿಲ್ಲ. ಅವರ ತಂದೆ ಸಾಮಾನ್ಯ ಮಧ್ಯಮ ವರ್ಗದ ರೈಲ್ವೇ ಉದ್ಯೋಗಿ, ಸಾತ್ವಿಕ ಸ್ವಭಾವದವರು. ತಾಯಿ ತಕ್ಕ ಮಟ್ಟಿಗೆ ಧೈರ್ಯಶಾಲಿಗಳು. ಹಾಗಿದ್ದರೂ ಮಗ ಉತ್ತಮ ನಾಯಕರಾಗಿ ಬೆಳೆದು ಬಂದದ್ದು ಉಲ್ಲೇಖಾರ್ಹ. ಸಂಘರ್ಷಕ್ಕೆ ಸಿದ್ಧರಾಗಿರುವ ಹೊಸಪೀಳಿಗೆಯ ತರುಣರಿಗೆ ಸಹಜವಾಗಿಯೇ ಧೈರ್ಯ, ಉತ್ಸಾಹಗಳಿರುತ್ತವೆ. ಅವರು ತಮ್ಮ ಧೈರ್ಯವನ್ನು ತ್ಯಾಗಕ್ಕಾಗಿ ಬಳಸುತ್ತಾರೆ. ಅಂಥವರು ಸಮಾಜಕ್ಕೆ ಉಪಯುಕ್ತ ಕೆಲಸಗಳನ್ನು ಮಾಡುತ್ತಾರೆ ಎಂದು ವಾಮನಾಚಾರ್ಯರೂ ಅವರ ಸಮಕಾಲೀನ ಮಾರ್ಗ ದರ್ಶಕರೂ ನಂಬಿದ್ದರು. ಅವರ ನಂಬುಗೆಯನ್ನು ನಿಜಗೊಳಿಸಬಲ್ಲ ಕುರುಹುಗಳನ್ನು ಅವರು ಆಗಲೇ ಅನಂತಕುಮಾರನಲ್ಲಿ ಕಾಣತೊಡಗಿದ್ದರು.

ಪುಟ 1 ರಿಂದ

## ರಾಮರಾಜ್ಯದ ಪವಿತ್ರಭೂಮಿ ಅಯೋಧ್ಯೆಯಲ್ಲಿ 500ನೇ ಹಸಿರು ಭಾನುವಾರ

### 100ನೇ ವಾರದ ಸಂಭ್ರಮ

ಎರಡನೇ ವರ್ಷದಲ್ಲಿ 'ಹಸಿರು ಭಾನುವಾರ' 100 ವಾರಗಳನ್ನು ಪೂರೈಸಿತು. ಇದನ್ನು ವಿಶೇಷವಾಗಿ ಆಚರಿಸುವ ನಿಟ್ಟಿನಲ್ಲಿ 100 ಸ್ಥಳಗಳಲ್ಲಿ ಗಿಡ ನೆಡಬೇಕು ಎಂಬುದು ಅನಂತಕುಮಾರ್ ಅವರ ಆಶಯವಾಗಿತ್ತು. 100 ಸ್ಥಳಗಳಲ್ಲಿ ಗಿಡಗಳನ್ನು ನೆಡುವುದು ಸುಲಭಸಾಧ್ಯವೇನೂ ಆಗಿರಲಿಲ್ಲ. ಇದಕ್ಕೆ ಗಿಡಗಳನ್ನು, ಸ್ವಯಂಸೇವಕರನ್ನು ಜೋಡಿಸುವುದು ಮುಖ್ಯವಾಗಿತ್ತು. ಆದರೆ, ಜನರ ಸಹಭಾಗಿತ್ವ ಮತ್ತು ಬೆಂಬಲ ಹೇಗಿತ್ತು ಎಂದರೆ ಒಟ್ಟು 140 ಸ್ಥಳಗಳಲ್ಲಿ ಗಿಡಗಳನ್ನು ನೆಡಲಾಯಿತು. ಬೆಂಗಳೂರು ಮಾತ್ರವಲ್ಲದೆ ರಾಜ್ಯದ ಬೇರೆ-ಬೇರೆ ಸ್ಥಳಗಳಲ್ಲಿ ಈ ಕಾರ್ಯಕ್ರಮ ನಡೆಯಿತು. ಬೆಂಗಳೂರಿನ ಐಐಎಸ್ಸಿ, ಬೆಂಗಳೂರು ವಿಶ್ವವಿದ್ಯಾಲಯ, ನಿಮ್ಹಾನ್ಸ್ ಆವರಣ ಮಾತ್ರವಲ್ಲದೆ ನಿವಾಸಿ ಬಡಾವಣೆಗಳಾದ ಜಯನಗರ, ಎಚ್‌ಎಸ್‌ಆರ್ ಲೇಔಟ್ ಸೇರಿ ಹಲವೆಡೆ ಗಿಡಗಳನ್ನು ನೆಡಲಾಯಿತು. ಪ್ರತಿ ತಂಡವೂ 100 ಗಿಡಗಳನ್ನು ನೆಟ್ಟು, ಅದರ ಭಾವಚಿತ್ರಗಳನ್ನು ಮುಖ್ಯ ತಂಡಕ್ಕೆ ಕಳುಹಿಸಿಕೊಟ್ಟಿದ್ದು ಗಮನಾರ್ಹ. ನಾಗರಿಕರು ಮಾತ್ರವಲ್ಲ ಸಮಾಜದ ನಾನಾರಂಗದ ಗಣ್ಯರು ಕೂಡ ಸಂತೋಷದಿಂದ 100ನೇ ಹಸಿರು ಭಾನುವಾರದಲ್ಲಿ ಪಾಲ್ಗೊಂಡರು. ಖ್ಯಾತ ಚಿತ್ರನಟ ಸುದೀಪ್, ಖ್ಯಾತ ಸಾಹಿತಿ ಡಾ.ಚಂದ್ರಶೇಖರ ಕಂಬಾರ, ದೊಡ್ಡರಂಗೇಗೌಡರು ಸೇರಿದಂತೆ ಹಲವು ಕ್ಷೇತ್ರಗಳ ಗಣ್ಯರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

### ಮಹತ್ವದ ತಿರುವು

ಹಸಿರು ಭಾನುವಾರ ಆಂದೋಲನ 150ನೇ ವಾರವನ್ನೂ ಯಶಸ್ವಿಯಾಗಿ ಪೂರೈಸಿತು. ಆದರೆ, ಈ ಆಂದೋಲನದ ಪ್ರೇರಕಶಕ್ತಿ ಅನಂತಕುಮಾರ್ ಅವರು 150ನೇ ಭಾನುವಾರದ ಮರುದಿನವೇ (ಸೋಮವಾರ) ಭೌತಿಕವಾಗಿ ನಮ್ಮನ್ನು ಅಗಲಿದರು. ಆದರೆ, ಅವರ ಕನಸನ್ನು ಜೀವಂತವಾಗಿ ಇಡಲು ಮತ್ತು ಅನಂತಕುಮಾರ್ ಅವರ ಸ್ಮರಣಾರ್ಥ ಈ ಆಂದೋಲನ ಮುಂದುವರಿಸಲು ಒಮ್ಮತದಿಂದ ನಿರ್ಧಾರ ಕೈಗೊಳ್ಳಲಾಯಿತು. ಅನಾರೋಗ್ಯದ ಸಂದರ್ಭದಲ್ಲೂ ಅನಂತಕುಮಾರ್ ಅವರು ಹಸಿರು ಭಾನುವಾರದ ಬಗೆಗಿನ ಮಾಹಿತಿಯನ್ನು ಆಸಕ್ತಿಯಿಂದ ಕೇಳಿ, ತಿಳಿದುಕೊಳ್ಳುತ್ತಿದ್ದರು. 'ನಾನು ಮುಂದೆ ಇರುತ್ತೇನೆಯೋ ಇಲ್ಲವೋ ಗೊತ್ತಿಲ್ಲ. ಆದರೆ, ಈ ಹಸಿರು ಆಂದೋಲನ ಸದಾ ನಡೆಯುತ್ತಿರಬೇಕು ಎಂದು ಬಯಸಿದ್ದರು. ಶ್ರೀ ಅನಂತಕುಮಾರ್ ಅವರ ಅಕಾಲಿಕ ನಿಧನದ ನೋವಿನಲ್ಲೂ ಬದ್ಧತೆಯನ್ನು ಮರೆಯದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಅನಂತವನದಲ್ಲಿ ನಡೆದ 151ನೇ ಹಸಿರು ಭಾನುವಾರದ ಕಾರ್ಯಕ್ರಮದಲ್ಲಿ ಭಾಗಿಯಾದರು.

### 200ನೇ ಹಸಿರು ಭಾನುವಾರ

ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ಅರಣ್ಯ ಸಚಿವರ ಉಪಸ್ಥಿತಿಯಲ್ಲಿ 201 ಗಿಡಗಳನ್ನು ನೆಡುವ ಮೂಲಕ 200ನೇ ಹಸಿರು ಭಾನುವಾರದ ಮೈಲಿಗಲ್ಲನ್ನು ಆಚರಿಸಲಾಯಿತು. ಈ ಪ್ರದೇಶ ಇಂದು ಪುಟ್ಟ ಕಾಡಾಗಿ ಕಂಗೊಳಿಸುತ್ತಿರುವುದನ್ನು ಗಮನಿಸಬಹುದು. ಆ ಬಳಿಕ ಮತ್ತಷ್ಟು ಉತ್ಸಾಹದೊಂದಿಗೆ ಅಭಿಯಾನ ಮುಂದುವರಿಯಿತು.

### 300ನೇ ಹಸಿರು ಭಾನುವಾರ

ಅದಮ್ಯ ಚೇತನ ಸಂಸ್ಥೆಯ ಸಮರ್ಪಿತ ಹಾಗೂ ಬದ್ಧತೆಯ ತಂಡವು ತನ್ನ ಗುರಿಗಳನ್ನು ತಾನೇ ವಿಸ್ತರಿಸುತ್ತ ಸಾಗಿತು. ಹಾಗಾಗಿ, 300ನೇ ಹಸಿರು ಭಾನುವಾರಕ್ಕೆ 300 ಅಲ್ಲ, 1500 ಗಿಡಗಳನ್ನು ನೆಡಲು ನಿರ್ಧರಿಸಲಾಯಿತು. ಬನ್ನೇರುಘಟ್ಟದ ಮಾನೆ ಕೆರೆಯ ಸುತ್ತಲೂ ಒಂದು ಸಾವಿರಕ್ಕೂ ಅಧಿಕ ಗಿಡಗಳನ್ನು ನೆಟ್ಟಿದ್ದು, ಸದಾ ನೆನಪಿನಲ್ಲಿ ಉಳಿಯುವಂಥ ಘಟನೆ. ಸಾಮೂಹಿಕ ಪ್ರಯತ್ನ ಮತ್ತು ಪ್ರಬಲ ಇಚ್ಛಾಶಕ್ತಿಯ ಫಲಿತಾಂಶವನ್ನು ಇದು ದರ್ಶಿಸಿತು.

### 400ನೇ ಹಸಿರು ಭಾನುವಾರ

ಸರ್ಜಾಪುರ ಕೆರೆಯ ಬಳಿ 400ನೇ ಹಸಿರು ಭಾನುವಾರ ಕಾರ್ಯಕ್ರಮ ಸಂಪನ್ನಗೊಂಡಿತು. ಮಹತ್ವದ ಸಂಗತಿಯೆಂದರೆ ಯಾವುದೇ ಕಾರ್ಯಕ್ರಮದಲ್ಲಿ ಸಂಖ್ಯೆ 100ಕ್ಕಿಂತ ಕಡಿಮೆ ಇರಲಿಲ್ಲ. ಅಲ್ಲದೆ, ಇದು ಬೆಂಗಳೂರಿಗೆ ಸೀಮಿತವಾಗಿ ಉಳಿಯದೆ ಕಿತ್ತೂರು ಕರ್ನಾಟಕದ ಹುಬ್ಬಳ್ಳಿ, ಕಲ್ಯಾಣ ಕರ್ನಾಟಕದ ರಾಯಚೂರು ಪ್ರದೇಶಗಳಿಗೂ ವಿಸ್ತಾರಗೊಂಡಿದೆ.



### ರಾಮನ ಜನ್ಮಸ್ಥಾನದಲ್ಲಿ 500ನೇ ಹಸಿರು ಭಾನುವಾರ

ಭಗವಾನ್ ಶ್ರೀರಾಮಚಂದ್ರ 500 ವರ್ಷಗಳ ನಂತರ ಜನ್ಮಭೂಮಿಯ ದೇವಸ್ಥಾನಕ್ಕೆ ಮರಳಿದ್ದಾನೆ. ಅಯೋಧ್ಯೆಯ ಶ್ರೀರಾಮ ಮಂದಿರ ನಿರ್ಮಾಣಕ್ಕಾಗಿ ನಡೆದಿರುವ ದೀರ್ಘ ಆಂದೋಲನ, ಜನರ ತ್ಯಾಗ, ಬಲಿದಾನ, ಕೊನೆಗೂ ಭಾರತದ ಅಸ್ಮಿತೆಗೆ, ಶ್ರದ್ಧೆಗೆ ಸಿಕ್ಕ ಜಯ... ಇದೆಲ್ಲ ಸಂಗತಿಗಳು ನಮಗೆ ಗೊತ್ತೇ ಇದೆ. ಅಯೋಧ್ಯೆಯಲ್ಲಿ ಶ್ರೀರಾಮ ಮಂದಿರ ಉದ್ಘಾಟನೆಯಾದ ನಂತರ ಹಲವು ತಿಂಗಳುಗಳ ಕಾಲ ಅದಮ್ಯ ಚೇತನ ಸಂಸ್ಥೆಯಿಂದ ಕರ್ನಾಟಕದ ಪ್ರವಾಸಿಗರಿಗಾಗಿ ಉಚಿತ ಉಪಾಹಾರದ ವ್ಯವಸ್ಥೆಯನ್ನು ಕಲ್ಪಿಸಲಾಗಿತ್ತು. ಹೀಗೆ ಹಲವು ಮಹತ್ವದ ಮೈಲಿಗಲ್ಲುಗಳನ್ನು ತಲುಪಿದ ನಂತರ 500ನೇ ಹಸಿರು ಭಾನುವಾರದ ಕಾರ್ಯಕ್ರಮ ಇದೇ ಜುಲೈ 27ರಂದು ಅಯೋಧ್ಯೆಯಲ್ಲಿ ನಡೆಯಲಿದೆ. ವಿಶೇಷವೆಂದರೆ ಕರ್ನಾಟಕದ ಪಶ್ಚಿಮಘಟ್ಟ ಪ್ರದೇಶದಿಂದ ತರಿಸಲಾದ ಸೀತಾಅಶೋಕ ಗಿಡಗಳನ್ನು ಅಯೋಧ್ಯೆಯಲ್ಲಿ ನೆಡಲಾಗುತ್ತದೆ. ಈಗಾಗಲೇ ಗಿಡಗಳು ಅಯೋಧ್ಯೆ ತಲುಪಿವೆ. 500ನೇ ಹಸಿರು ಭಾನುವಾರ ಬರೀ ಒಂದು ಕಾರ್ಯಕ್ರಮವಲ್ಲ ; ಅನಂತಕುಮಾರ್ ಅವರ ಸಸ್ಯಾಗ್ರಹ (ಹಸಿರು ಸತ್ಯಾಗ್ರಹ)ವನ್ನು ಶ್ರೀರಾಮನ ದಿವ್ಯ ಆಶೀರ್ವಾದದೊಂದಿಗೆ ಕರ್ನಾಟಕದಿಂದ ಭಾರತದ ಹೃದಯಭಾಗವಾದ ಅಯೋಧ್ಯೆಗೆ ಕೊಂಡೊಯ್ಯುವುದಾಗಿದೆ.

### ತೆರೆಮರೆಯ ಹೀರೋಗಳು

ಹಸಿರು ಭಾನುವಾರ ಆಂದೋಲನ 2016ರಿಂದ ಈವರೆಗೆ ಯಶಸ್ವಿಯಾಗಿ ಮತ್ತು ಪರಿಣಾಮಕಾರಿಯಾಗಿ ನಡೆದುಕೊಂಡು ಬರಲು ಹತ್ತಾರು ಸ್ವಯಂಸೇವಕರ ಬದ್ಧತೆ, ಸಮರ್ಪಣೆ ಕಾರಣವಾಗಿದೆ. ಇವರೆಲ್ಲ ತೆರೆಮರೆಯಲ್ಲಿ ಇದ್ದುಕೊಂಡೇ ಪರಿಸರ ಸಂರಕ್ಷಣೆಯ ಕೆಲಸವನ್ನು ಮಾಡುತ್ತಿದ್ದಾರೆ. ಹಸಿರು ಭಾನುವಾರದ ಉದ್ದೇಶ ಮತ್ತು ಅದಮ್ಯ ಚೇತನದ ವಿಶಾಲ ದೃಷ್ಟಿಕೋನದ ಬಗ್ಗೆ ಮನೋಜ್ ಕೌಲಗೌಡ ಹಾಗೂ ಕುಮಾರಸ್ವಾಮಿ ನೇತೃತ್ವದ ಸ್ವಯಂಸೇವಕರು ಪ್ರತಿವಾರ ತಿಳಿಸಿಕೊಡುತ್ತಾರೆ. ಎಷ್ಟೇ ಕಾರ್ಯದೊತ್ತಡವಿದ್ದರೂ ತೇಜಸ್ವಿನಿ ಅನಂತಕುಮಾರ್ ಅವರು ತಪ್ಪದೇ ಹಸಿರು ಭಾನುವಾರ ಕಾರ್ಯಕ್ರಮದಲ್ಲಿ ಭಾಗವಹಿಸುತ್ತ, ಪರಿಸರ ಸಂರಕ್ಷಣೆಯ ಅಗತ್ಯವನ್ನು ಮನದಟ್ಟು ಮಾಡಿಕೊಡುತ್ತಿದ್ದಾರೆ.

ಶೂನ್ಯ ಇಂಗಾಲ ಸೂಸುವಿಕೆ, ಪರಿಸರ ಸ್ನೇಹಿ ಜೀವನಶೈಲಿ, ಮನೆಯಲ್ಲೇ ಅಳವಡಿಸಿಕೊಳ್ಳಬಹುದಾದ ಪರಿಸರಪೂರಕ ಕ್ರಮಗಳ ಬಗ್ಗೆ ಜನರಿಗೆ ಮನದಟ್ಟಾಗುವಂತೆ ತಿಳಿಸಿಕೊಡುತ್ತಾರೆ. ಮಾತ್ರವಲ್ಲ, ಶ್ರೀ ಪ್ರಕಾಶ್ ಎನ್ ಮತ್ತು ಶ್ರೀಮತಿ ಶಾರದಾ ಪ್ರಕಾಶ್, ನರಸಿಂಹ ಪ್ರಸಾದ್ ಈ ಆಂದೋಲನದ ಹಿಂದಿನ ಚಾಲಕ ಶಕ್ತಿಯಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಕೋವಿಡ್ ಸಾಂಕ್ರಾಮಿಕದ ಕ್ಲಿಷ್ಟಕರ ಹೊತ್ತಿನಲ್ಲೂ ಶ್ರೀ ಶ್ರೀಕಾಂತ್, ಶ್ರೀಮತಿ ಸುಜಾತ ಮೊದಲಾದವರು ಹಸಿರು ಭಾನುವಾರ ಕಾರ್ಯಕ್ರಮವನ್ನು ಸಾಂಕೇತಿಕವಾಗಿ ಮತ್ತು ಜವಾಬ್ದಾರಿಯುತವಾಗಿ ಮುಂದುವರಿಸಿದರು. ಬಿಎಂಎಸ್, ನಿಟ್ಟೆ ಮೀನಾಕ್ಷಿ, ಆರ್‌ವಿ, ಆರ್‌ಎನ್ ಶೆಟ್ಟಿ ಇನ್‌ಸ್ಟಿಟ್ಯೂಟ್, ನೃಪತುಂಗ ಕಾಲೇಜು, ಮತ್ತು ರಾಷ್ಟ್ರೋತ್ಥಾನದಂತಹ ಶೈಕ್ಷಣಿಕ ಸಂಸ್ಥೆಗಳು, ಮತ್ತು ಸ್ಯಾನ್, ಯುಟೋಪಿಯಾ, ಸ್ಲಿಗ್ಗಾ , ಐಬಿಎಂ, ಓಕ್ ಸಿಸ್ಟಮ್, ಯೂತ್ ಫಾರ್ ಸೇವಾ ಈ ಕಾರ್ಯಕ್ಕೆ ಸದಾ ಬೆಂಬಲವಾಗಿ ನಿಂತಿವೆ. ಹೀಗೆ ಹಸಿರು ಭಾನುವಾರ ಆಂದೋಲನವು ಜೀವನಶೈಲಿಯ ಆಂದೋಲನವಾಗಿದ್ದು, ಹಸಿರು ಕ್ರಾಂತಿ ನಿಟ್ಟಿನಲ್ಲಿ ಇರಿಸಿದ ದಿಟ್ಟ ಹೆಜ್ಜೆಯಾಗಿದೆ. 8ನೇ ವಯಸ್ಸಿನ ಪುಟ್ಟ ಮಕ್ಕಳಿಂದ ಹಿಡಿದು 80 ವರ್ಷದವರೆಗಿನ ಹಿರಿಯರು ಕೂಡ ಉತ್ಸಾಹದಲ್ಲಿ ಪಾಲ್ಗೊಳ್ಳುತ್ತಿರುವುದು ನಮ್ಮ ಶಕ್ತಿಯನ್ನು ಹೆಚ್ಚಿಸಿದೆ. ದಾರ್ಶನಿಕ ನಾಯಕತ್ವಕ್ಕೆ ಸಲ್ಲಿಸುವ ಗೌರವವೂ ಆಗಿದೆ. ಅಚಲವಾದ ಬದ್ಧತೆ ಮತ್ತು ಭಾಗವಹಿಸುವಿಕೆಯೊಂದಿಗೆ ಹಸಿರು ಭಾನುವಾರದ ಶಕ್ತಿಯು ಮುಂದಿನ ಪೀಳಿಗೆಗಳಿಗೆ ಮಾದರಿಯಾಗಲಿ.

ಪುಟ 1 ರಿಂದ

# ಅದಮ್ಯ ಚೇತನ ಸಂಸ್ಥೆಯಿಂದ ವೈದ್ಯರ ದಿನಾಚರಣೆ ಮತ್ತು ಸಾಧಕರಿಗೆ ಗೌರವ ಸನ್ಮಾನ





ಜುಲೈ 1, 2025ರಂದು ವೈದ್ಯರ ದಿನಾಚರಣೆಯ ಪ್ರಯುಕ್ತ ಅದಮ್ಯ ಚೇತನ ಸಂಸ್ಥೆಯು ಒಂದು ವಿಶೇಷ ಕಾರ್ಯಕ್ರಮವನ್ನು ಆಯೋಜಿಸಿ, ಸಮಾಜಕ್ಕೆ ಗಣನೀಯ ಸೇವೆ ಸಲ್ಲಿಸಿದ ಇಬ್ಬರು ಗಣ್ಯರನ್ನು ಗೌರವಿಸಿತು. ಈ ಕಾರ್ಯಕ್ರಮದಲ್ಲಿ ಡಾ. ಸೌಮ್ಯಾ ಪ್ರಸಾದ್ ಮತ್ತು ಪದ್ಮಶ್ರೀ ಪ್ರಶಸ್ತಿ ವಿಜೇತೆ ಡಾ. ವಿಜಯಲಕ್ಷ್ಮೀ ದೇಶಮಾನೆ ಅವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದರು

**ಪರಿಸರ ತಜ್ಞೆ ಡಾ. ಸೌಮ್ಯಾ ಪ್ರಸಾದ್ ಅವರಿಂದ ಪರಿಸರ ಜಾಗೃತಿ ಭಾಷಣ:**

ಕಾರ್ಯಕ್ರಮದಲ್ಲಿ ಡಾ. ಸೌಮ್ಯಾ ಪ್ರಸಾದ್ ಅವರು 'ಸುಸ್ಥಿರ ಪರಿಸರ ಅಭಿವೃದ್ಧಿ ಮತ್ತು ಪರಿಸರ ರಕ್ಷಣೆ' ಕುರಿತು ಮಹತ್ವದ ಭಾಷಣ ಮಾಡಿದರು. ಆಧುನಿಕ ಜೀವನಶೈಲಿಯಿಂದ ಉಂಟಾಗುತ್ತಿರುವ ಆರೋಗ್ಯ ಸಮಸ್ಯೆಗಳು, ಸಂಸ್ಕರಿಸಿದ ಆಹಾರಗಳ ದುಷ್ಪರಿಣಾಮಗಳು ಮತ್ತು ಏಕಬಳಕೆಯ ಪ್ಲಾಸ್ಟಿಕ್ ಬಳಕೆಯಿಂದ ಪರಿಸರ ಮತ್ತು ಆರೋಗ್ಯದ ಮೇಲಾಗುವ ಹಾನಿಗಳ ಕುರಿತು ಅವರು ಸಭಿಕರಿಗೆ ಮನವರಿಕೆ ಮಾಡಿಕೊಟ್ಟರು.

ಇತ್ತೀಚಿನ ದಿನಗಳಲ್ಲಿ ಹೆಚ್ಚುತ್ತಿರುವ ಜಂಕ್ ಮತ್ತು ಸಂಸ್ಕರಿಸಿದ ಆಹಾರಗಳ ಸೇವನೆಯು ಆರೋಗ್ಯದ ಮೇಲೆ ಗಂಭೀರ ಪರಿಣಾಮ ಬೀರುತ್ತಿದೆ. ಇವುಗಳಲ್ಲಿರುವ ಅತಿಯಾದ ಉಪ್ಪು, ಸಕ್ಕರೆ ಮತ್ತು ಅನಾರೋಗ್ಯಕರ ಕೊಬ್ಬುಗಳು ಬೊಜ್ಜು, ಮಧುಮೇಹ ಮತ್ತು ಹೃದಯ ಸಂಬಂಧಿ ಕಾಯಿಲೆಗಳಿಗೆ ಕಾರಣವಾಗುತ್ತಿವೆ.

ಏಕಬಳಕೆಯ ಪ್ಲಾಸ್ಟಿಕ್ ಉತ್ಪನ್ನಗಳಾದ ಬಾಟಲಿಗಳು, ಕಪ್‌ಗಳು, ಪ್ಲೇಟ್‌ಗಳು ಇತ್ಯಾದಿಗಳು ಕೇವಲ ಪರಿಸರ ಮಾಲಿನ್ಯಕ್ಕೆ ಮಾತ್ರವಲ್ಲದೆ, ನಮ್ಮ ಆರೋಗ್ಯಕ್ಕೂ ಮಾರಕವಾಗಿವೆ. ಇವುಗಳಲ್ಲಿರುವ ರಾಸಾಯನಿಕಗಳು ಆಹಾರ ಮತ್ತು ನೀರಿನ ಮೂಲಕ ನಮ್ಮ ದೇಹ ಸೇರಿ ವಿವಿಧ ಕಾಯಿಲೆಗಳಿಗೆ, ವಿಶೇಷವಾಗಿ ಹಾರ್ಮೋನ್ ಅಸಮತೋಲನಕ್ಕೆ ಕಾರಣವಾಗಬಹುದು ಎಂದರು. ಬಂಜೆತನದ ಸಮಸ್ಯೆ ಮತ್ತು ಜನಸಂಖ್ಯೆ ಇಳಿಮುಖದಂತಹ ಸೂಕ್ಷ್ಮ ವಿಷಯಗಳನ್ನು ಪ್ರಸ್ತಾಪಿಸಿ, ಸುಸ್ಥಿರ ಅಭಿವೃದ್ಧಿ ಮತ್ತು ಪರಿಸರ ಸಂರಕ್ಷಣೆಯ ಮಹತ್ವವನ್ನು ಒತ್ತಿ ಹೇಳಿದರು.

ಪದ್ಮಶ್ರೀ ಪ್ರಶಸ್ತಿ ವಿಜೇತೆ ಡಾ. ವಿಜಯಲಕ್ಷ್ಮೀ ದೇಶಮಾನೆ ಅವರು ತಮ್ಮ ಕೌಟುಂಬಿಕ ಜೀವನದ ಕುರಿತು ಮತ್ತು ಪ್ರತಿಷ್ಠಿತ ಪದ್ಮಶ್ರೀ ಪ್ರಶಸ್ತಿ ಪಡೆಯುವಾಗ ನಡೆದ ಸ್ಮರಣೀಯ ಅನುಭವಗಳನ್ನು ಸಭಿಕರೊಂದಿಗೆ ಹಂಚಿಕೊಂಡರು. ಅವರ ಜೀವನ ಪಯಣ ಮತ್ತು ಸಾಧನೆಗಳು ಸಭಿಕರಿಗೆ ಸ್ಫೂರ್ತಿ ನೀಡಿದವು.

ಕಾರ್ಯಕ್ರಮದ ಪ್ರಮುಖ ಭಾಗವಾಗಿ, ಅದಮ್ಯ ಚೇತನ ಸಂಸ್ಥೆಯು ಡಾ. ಸೌಮ್ಯಾ ಪ್ರಸಾದ್ ಮತ್ತು ಪದ್ಮಶ್ರೀ ಪ್ರಶಸ್ತಿ ವಿಜೇತೆ ಡಾ. ವಿಜಯಲಕ್ಷ್ಮೀ ದೇಶಮಾನೆ ಅವರ ಸಾಧನೆಗಳು ಮತ್ತು ಸಮಾಜಕ್ಕೆ ನೀಡಿದ ಅಸಾಧಾರಣ ಕೊಡುಗೆಗಳನ್ನು ಗುರುತಿಸಿ, ಗೌರವಪೂರ್ವಕವಾಗಿ ಸನ್ಮಾನಿಸಿತು. ಸಂಸ್ಥೆಯ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಮತಿ ಪ್ರತಿಭಾ ಓಕ್, ಸಂಸ್ಥೆಯ ಕಾರ್ಯಕರ್ತ ಬಂಧುಗಳು ಭಾಗಿಯಾಗಿದ್ದರು.

# ಅದಮ್ಯ ಚೇತನದಿಂದ 'ಕಾಂಪೋಸ್ಟಿಂಗ್' ಕುರಿತು ಯಶಸ್ವಿ ಆನ್‌ಲೈನ್ ಕಾರ್ಯಾಗಾರ

ಹಸಿರು ಜೀವನಶೈಲಿಯ ಪ್ರಚಾರದಲ್ಲಿ ಮುಂಚೂಣಿಯಲ್ಲಿರುವ ಅದಮ್ಯ ಚೇತನ ಸಂಸ್ಥೆಯು, ಅನಂತ ಹಸಿರು ಜೀವನಶೈಲಿ ಸಂಪನ್ಮೂಲ ಕೇಂದ್ರದ ಮೂಲಕ ಸರಣಿ ಕಾರ್ಯಾಗಾರಗಳನ್ನು ಹಮ್ಮಿಕೊಂಡಿದೆ. ಇದರ ಭಾಗವಾಗಿ, ೨೦೨೫ರ ಜುಲೈ ೧೨ ರಂದು 'ಪ್ಲೇಟ್‌ಬ್ಯಾಂಕ್ ಮತ್ತು ಕಾಂಪೋಸ್ಟಿಂಗ್' ಕುರಿತು ಒಂದು ಮಹತ್ವದ ಜಾಗೃತಿ ಕಾರ್ಯಕ್ರಮವನ್ನು ಆನ್‌ಲೈನ್ ಮೂಲಕ ಯಶಸ್ವಿಯಾಗಿ ಆಯೋಜಿಸಲಾಯಿತು. ನೂರಕ್ಕೂ ಹೆಚ್ಚು ಸಮಾನ ಮನಸ್ಕರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿ, ಹಸಿರು ಜೀವನಶೈಲಿಯ ಕುರಿತು ತಮ್ಮ ಆಸಕ್ತಿಯನ್ನು ಪ್ರದರ್ಶಿಸಿದರು.

ಅದಮ್ಯ ಚೇತನದ ಟ್ರಸ್ಟಿಗಳಾದ ಶ್ರೀ ಪ್ರದೀಪ್ ಓಕ್ ಅವರು ಕಾರ್ಯಕ್ರಮದಲ್ಲಿ ಪ್ಲೇಟ್‌ಬ್ಯಾಂಕ್ ಉಪಕ್ರಮದ ಬಗ್ಗೆ ವಿಸ್ತೃತವಾಗಿ ಮಾತನಾಡಿದರು. ಸಂಸ್ಥೆಯು ಈ ಉಪಕ್ರಮವನ್ನು ಹೇಗೆ ಯಶಸ್ವಿಯಾಗಿ ಜಾರಿಗೆ ತಂದಿದೆ ಮತ್ತು ವಿವಿಧ ಶಾಖೆಗಳಲ್ಲಿ ಅನುಸರಿಸುತ್ತಿರುವ ಉತ್ತಮ ಅಭ್ಯಾಸಗಳು ಯಾವುವು ಎಂಬುದನ್ನು ಅವರು ವಿವರಿಸಿದರು. ತ್ಯಾಜ್ಯ ಮುಕ್ತ ಕಾರ್ಯಕ್ರಮಗಳನ್ನು ಆಯೋಜಿಸುವಲ್ಲಿ ಪ್ಲೇಟ್‌ಬ್ಯಾಂಕ್‌ನ ಪಾತ್ರವನ್ನು ಅವರು ಒತ್ತಿ ಹೇಳಿದರು.

ಅದಮ್ಯ ಚೇತನದ ಪ್ರಮುಖ ಸ್ವಯಂಸೇವಕರಾದ ಡಾ. ರಾಜೇಂದ್ರ ಹೆಗ್ಡೆ ಅವರು ಕಾಂಪೋಸ್ಟಿಂಗ್‌ನ ಪ್ರಾಯೋಗಿಕ ಅಂಶಗಳ ಕುರಿತು ಉಪನ್ಯಾಸ ನೀಡಿದರು. ಕಾಂಪೋಸ್ಟಿಂಗ್ ಪ್ರಕ್ರಿಯೆಯಲ್ಲಿ ಅನುಸರಿಸಬೇಕಾದ ಕ್ರಮಗಳು (Do's) ಮತ್ತು ತಪ್ಪಿಸಬೇಕಾದ ವಿಷಯಗಳ (Don'ts) ಬಗ್ಗೆ ಅವರು ಸ್ಪಷ್ಟ ಮಾಹಿತಿ ನೀಡಿದರು. ಅಲ್ಲದೆ, ಕಾಂಪೋಸ್ಟಿಂಗ್‌ನಲ್ಲಿ ಅದಮ್ಯ ಚೇತನದ ಯಶಸ್ವಿ ಕಥೆಗಳನ್ನು ಉದಾಹರಣೆಗಳೊಂದಿಗೆ ಹಂಚಿಕೊಂಡರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಅದಮ್ಯ ಚೇತನದ ಅಧ್ಯಕ್ಷರಾದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಸಭೆಯನ್ನುದ್ದೇಶಿಸಿ ಮಾತನಾಡಿದರು. ಪ್ಲೇಟ್‌ಬ್ಯಾಂಕ್ ಉಪಕ್ರಮದ ಯಶಸ್ಸನ್ನು ಶ್ಲಾಘಿಸಿದ ಅವರು, ಶೂನ್ಯ ತ್ಯಾಜ್ಯ ಕಾರ್ಯಕ್ರಮಗಳತ್ತ ಸಾಗಲು ಜನರು ಈ ಉಪಕ್ರಮದಿಂದ ಹೇಗೆ ಪ್ರೇರಿತರಾಗುತ್ತಿದ್ದಾರೆ ಎಂಬುದನ್ನು ವಿವರಿಸಿದರು..



ಮನೆಯಲ್ಲಿ ಕಾಂಪೋಸ್ಟಿಂಗ್ ಮಾಡುವುದು ಎಷ್ಟು ಸುಲಭ ಮತ್ತು ಪರಿಸರ ಸ್ನೇಹಿಯಾಗಿದೆ ಎಂಬುದನ್ನು ಅವರು ತಿಳಿಸಿದರು. ಅಲ್ಲದೆ, ಮನೆಗಳಲ್ಲಿ ಕಾಂಪೋಸ್ಟಿಂಗ್ ಅನ್ನು ಅಳವಡಿಸಿಕೊಳ್ಳಲು ಅದಮ್ಯ ಚೇತನವು ಸಂಪೂರ್ಣ ಸಹಕಾರ ನೀಡಲು ಸಿದ್ಧವಿದೆ ಎಂದು ಭರವಸೆ ನೀಡಿದರು.



# ಚಿಣ್ಣರ ಚೇತನ

ಓ ನನ್ನ ಚೇತನ ಆಗು ನೀ ಅನಿಕೇತನ



## ಶಕ್ತಿವರ್ಧಕ ತೈಲ, ಸುಸ್ಥಿರತೆಗೆ ಪೂರಕ !

ಶ್ರಾವಣ ಮಾಸ ಮುಗಿದು ಭಾದ್ರಪದ ಶುರುವಾಗುತ್ತಲೇ (24 ಆಗಸ್ಟ್) ರೈತರ ಹೊಲಗಳಲ್ಲಿ ಸೂರ್ಯಕಾಂತಿಯ ಹೂಗಳ ಸುಂದರ ಸಮುದ್ರವೇ ಕಾಣುತ್ತದೆ. ಜೇನ್ನೊಣಗಳಿಗೂ ಇದು ಹಬ್ಬದ ಕಾಲ. ಅವು ಹೂಗಳ ಮಕರಂದ ಹೀರಿ ಜೇನು ಉತ್ಪಾದಿಸಿದರೆ, ಇತ್ತ ಹೂಗಳಲ್ಲಿ ಬೀಜಗಳು ಗಟ್ಟಿಯಾಗುತ್ತವೆ. ಸಮೃದ್ಧ ಫಸಲು ಬಂದರೆ ರೈತರೂ ಗಟ್ಟಿಯಾಗುತ್ತಾರೆ. ಸೂರ್ಯಕಾಂತಿಯ ಎಣ್ಣೆಯನ್ನು ಆಹಾರದಲ್ಲಿ ಸೇವಿಸಿ ನಾವೂ ಗಟ್ಟಿಯಾಗುತ್ತೇವೆ. ಎಣ್ಣೆಯನ್ನು ಹಿಂಡಿದ ನಂತರ ಉಳಿಯುವ ಹಿಂಡಿಯನ್ನು ಮೇವಿನ ಜೊತೆ ತಿಂದು ಪಶುಗಳೂ ಗಟ್ಟಿಯಾಗುತ್ತವೆ. ನಿಸರ್ಗ ಎಷ್ಟು ಚಂದದ ವ್ಯವಸ್ಥೆಯನ್ನು ಮಾಡಿಟ್ಟಿದೆ ನೋಡಿ!

ಸೂರ್ಯಕಾಂತಿಯ ಎಣ್ಣೆಯಿಂದ ಎಂಜಿನ್‌ಗಳನ್ನೂ ಓಡಿಸಬಹುದು. ಆಗ ಆ ಎಣ್ಣೆಗೆ 'ಬಯೊ ಡೀಸೆಲ್' ಎನ್ನುತ್ತಾರೆ. ಡೀಸೆಲ್ ಎಂದರೆ ನಿಮಗೆಲ್ಲ ಗೊತ್ತು. ಬಸ್, ಟ್ರಾಕ್ಟರ್, ಲಾರಿಗಳಿಗೆ ಪೆಟ್ರೋಲ್ ಅಲ್ಲ, ಡೀಸೆಲ್ ಇಂಧನ ಹಾಕಿ ಓಡಿಸುತ್ತಾರೆ. ನಿಮ್ಮಲ್ಲಿ ಅನೇಕರು ಡೀಸೆಲ್ ವಾಹನಗಳಲ್ಲೇ ಶಾಲೆಗೆ ಬರುತ್ತೀರಿ. ಅಂದಹಾಗೆ, ಡೀಸೆಲ್ ಎಂಬುದು ಜರ್ಮನ್ ಎಂಜಿನಿಯರ್/ವಿಜ್ಞಾನಿಯ ಹೆಸರು. ರಡಾಲ್ಫ್ ಡೀಸೆಲ್ ಎಂಬಾತ 1897ರಲ್ಲಿ ಸೇಂಗಾ (ಕಡ್ಲೆಕಾಯಿ) ಎಣ್ಣೆಯಿಂದ ಓಡಬಲ್ಲ ಎಂಜಿನ್ನನ್ನು ರೂಪಿಸಿದ! ಆದರೆ ನಂತರ ಅಡುಗೆ ಎಣ್ಣೆಯನ್ನು ಕೈಬಿಟ್ಟು ಗಣಿಯಿಂದ ಮೇಲೆತ್ತಿದ ಕಚ್ಚಾತೈಲವೇ ಬಳಕೆಗೆ ಬಂತು. ಆ ತೈಲಕ್ಕೆ ಡೀಸೆಲ್ ಎಂಬ ಹೆಸರು ಬಂತು; ಆತ ರೂಪಿಸಿದ ಎಂಜಿನ್ ಕೂಡ ಡೀಸೆಲ್ ಎಂಜಿನ್ ಎಂದೇ ಖ್ಯಾತಿ ಪಡೆಯಿತು.

ಈ ಎಂಜಿನ್ನಿಗೆ ಸೂರ್ಯಕಾಂತಿಯ ಅಥವಾ ಸೇಂಗಾ ಎಣ್ಣೆಯನ್ನೂ ಹಾಕಿ ಯಂತ್ರಗಳನ್ನು ಓಡಿಸಬಹುದು. ಪೆಟ್ರೋಲ್, ಡೀಸೆಲ್, ಕಲ್ಲಿದ್ದಲು, ಸೀಮೆಎಣ್ಣೆ ಇತ್ಯಾದಿ ಖನಿಜ ಇಂಧನಗಳನ್ನು ಉರಿಸಿದ್ದರಿಂದ ಈಗೀಗ ಭೂಮಿ ಬಿಸಿಯಾಗುತ್ತದೆ. ಆದ್ದರಿಂದ ಅದಕ್ಕೆ ಬದಲಿಯಾಗಿ ಯಂತ್ರಗಳಿಗೆ ಸಸ್ಯಮೂಲದ ತೈಲಗಳನ್ನೇ ಜಾಸ್ತಿ ಬಳಸಬೇಕೆಂದು ಜಗತ್ತಿನೆಲ್ಲೆಡೆ ಚಿಂತನೆ ನಡೆಯುತ್ತಿದೆ. ಆಗಸ್ಟ್ 10ರಂದು "ಜಾಗತಿಕ ಬಯೊಡೀಸೆಲ್ ಡೇ" ಎಂದು ಆಚರಿಸುತ್ತಾರೆ. ಭಾರತ ಸರ್ಕಾರವೂ ಡೀಸೆಲ್ ಎಂಜಿನ್‌ಗಳಲ್ಲಿ ಜಾಸ್ತಿ ಜಾಸ್ತಿ ಬಯೊಡೀಸೆಲ್ ಬಳಸಲು ನಿರ್ಧರಿಸಿದೆ. ಆದರೆ ಒಂದು ಸಮಸ್ಯೆ ಇದೆ. ಸೂರ್ಯಕಾಂತಿ ಎಣ್ಣೆ, ಸೇಂಗಾ ಎಣ್ಣೆ, ಕುಸುಬೆ ಎಣ್ಣೆ, ತೆಂಗಿನೆಣ್ಣೆ, ಎಳ್ಳೆಣ್ಣೆ ಇವನ್ನೆಲ್ಲ ಡೀಸೆಲ್ ಎಂಜಿನ್‌ಗಳಿಗೆ ಬಳಸಿದರೆ ನಮ್ಮ ಅಡುಗೆಗೆ ಎಣ್ಣೆ ಕೊರತೆ ಆದೀತು. ಏನು ಮಾಡುವುದು? ಅದಕ್ಕೇ ಇಂಥ ಖಾದ್ಯತೈಲದ ಬದಲು ಕಾಡುಬೀಜಗಳ ತೈಲವನ್ನೇ ಎಂಜಿನ್‌ಗಳಿಗೆ ಬಳಸಬಹುದು. ಹೊಂಗೆ, ಸೀಮಾರೂಬಾ, ಜತ್ರೋಫಾ, ಔಡಲ ಮತ್ತು ಬೇವಿನಂಥ (ತಿನ್ನಲು ಯೋಗ್ಯವಲ್ಲದ) ಬೀಜಗಳಿಂದ ಎಣ್ಣೆ ತೆಗೆದು ಬಳಸಬೇಕು.

## ಸೀಮೆಸುಣ್ಣದಿಂದ ತಯಾರಾಗುವ ಕಾಗದ!

ಚಾಕ್‌ಪೀಸ್ (ಖಡು ಅಥವಾ ಸೀಮೆಸುಣ್ಣ) ಕೈಯಲ್ಲಿದ್ದರೆ ಸುಂದರ ಅಕ್ಷರಗಳನ್ನೂ ಬರೆಯಬಹುದು, ಸುಂದರ ಶಿಲ್ಪಗಳನ್ನೂ ಕೊರೆಯಬಹುದು. ಅದರದೇ ಪುಡಿಯಿಂದ ಕಾಗದವನ್ನೂ ತಯಾರಿಸಬಹುದು ಗೊತ್ತೆ? ಈ ಪುಡಿಗೆ ಕ್ಯಾಲ್ಸಿಯಂ ಕಾರ್ಬೋನೇಟ್ ಎನ್ನುತ್ತಾರೆ. ಇದನ್ನು ನುಣ್ಣಗೆ ಅರೆದು ರಾಳ (ರೆಸಿನ್) ಸೇರಿಸಿ ಬಿಸಿ ಮಾಡಬೇಕು. ಅದು ರೊಟ್ಟಿಯ ಹಿಟ್ಟಿನಂತಾಗುತ್ತದೆ. ಅದನ್ನು ಅಡ್ಡಗಾಣದ ಮೂಲಕ ಒತ್ತಿದರೆ ಬಿಳಿ ಬಿಳಿ ಹೊಳಪಿನ ಹಾಳೆಗಳಾಗಿ ಹೊರಬರುತ್ತದೆ. ತುಸು ದಪ್ಪ ಇದ್ದರೆ ಬಿಳಿ ರಟ್ಟು. ತೀರ ಸಪೂರ ಇದ್ದರೆ ಅದು ಕಾಗದವೇ! ಆ ಕಾಗದ ನೀರಲ್ಲಿ ನೆನೆಯುವುದಿಲ್ಲ. ಸುಲಭಕ್ಕೆ ಹರಿಯಲು ಅಥವಾ ಸುಡಲು ಸಾಧ್ಯವಿಲ್ಲ. ಮುಖ್ಯ ಏನೆಂದರೆ ಇದರ ಉತ್ಪಾದನೆಗೆ ಗಿಡಮರಗಳನ್ನು ಕತ್ತರಿಸಬೇಕಿಲ್ಲ. ಮೇಲಾಗಿ ಇದನ್ನು ಸಂಪೂರ್ಣ ಮರುಬಳಕೆ ಮಾಡಬಹುದು.

ಇದರ ಉತ್ಪಾದನೆಗೆ ಬೇಕಾದ ರಾಳವನ್ನು ಪೆಟ್ರೋಲಿಯಂ ಅಥವಾ ನೈಸರ್ಗಿಕ ಅನಿಲದಿಂದ ಪಡೆಯುತ್ತಾರೆ. ಅದರ ಬದಲಿಗೆ ಈಗೀಗ ಕಬ್ಬಿನ ಸಿಪ್ಪೆ ಅಥವಾ ಜೋಳದ ದಂಟು ಅಥವಾ ಕತ್ತಾಳೆ ಸಸ್ಯದಿಂದಲೂ ರಾಳವನ್ನು ಉತ್ಪಾದಿಸಲಾಗುತ್ತದೆ. ಅಂದಮೇಲೆ ಅದು ನೂರಕ್ಕೆ ನೂರು ನೈಸರ್ಗಿಕ.



## ಎಂದೂ ಹಾಳಾಗದ ಜೇನು ತುಪ್ಪ!


ಜೇನುತುಪ್ಪವನ್ನು ಯಾವುದೇ ಪಾತ್ರೆಯಲ್ಲಿ ಎಷ್ಟೇ ದಿನ ಇಟ್ಟರೂ ಅದು ಹಾಳಾಗುವುದಿಲ್ಲ. ಮುಗ್ಗುವುದಿಲ್ಲ, ಕೊಳೆಯುವುದಿಲ್ಲ. ಈಜಿಪ್ಟಿನ ಪಿರಮಿಡ್ ಕೆಳಗಿನ ಸಮಾಧಿಯಲ್ಲಿ ಮೂರು ಸಾವಿರ ವರ್ಷಗಳ ಹಿಂದಿನ ಇತರ ಸಾಮಗ್ರಿಗಳ ಜೊತೆಗೆ ಜೇನು ತುಪ್ಪ ಕೂಡ ಅದನ್ನು ಪರೀಕ್ಷಿಸಿದಾಗ ಈಗಲೂ ತಾಜಾ ಸ್ಥಿತಿಯಲ್ಲೇ ಇತ್ತು. ಗಾಯಗಳಿಗೆ ಜೇನುತುಪ್ಪವನ್ನು ಸವರುವ ಪದ್ಧತಿ ನಮ್ಮಲ್ಲಿದೆ. ಗಾಯದ ಮೂಲಕ ರೋಗಕಾರಕ ಸೂಕ್ಷ್ಮಾಣುಗಳು ನಮ್ಮ ದೇಹದ ಒಳಕ್ಕೆ ಹೋಗದಂತೆ ಮಾಡಲು ಇದು ಒಳ್ಳೆಯ ಉಪಾಯ.



## ಆಕಾಶದಲ್ಲಿ ಓಝೋನ್ ಅಳೆದ ಅಣ್ಣಾಮಣಿ

ಸರ್ ಸಿ.ವಿ. ರಾಮನ್ ಅವರ ಕೈಕೆಳಗೆ ಕೆಲಸ ಮಾಡಿದ ಮಹಿಳೆ ಅಣ್ಣಾಮಣಿ ಎಂಬ ಸಾಧಕಿಯ ಬಗ್ಗೆ ನಮಗೆ ಗೊತ್ತಿರಬೇಕು. ಅವರು 1918ರ ಆಗಸ್ಟ್ 22ರಂದು ತಿರುವಾಂಕೂರಿನಲ್ಲಿ ಜನಿಸಿ, ಮದ್ರಾಸ್‌ನಲ್ಲಿ ಓದಿ, ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಗೆ ಬಂದರು. ಇಲ್ಲಿ ವಜ್ರ ಮತ್ತು ಪಚ್ಚೆ ಸ್ಫಟಿಕಗಳ ಮೇಲೆ ಬೆಳಕಿನ ಕಿರಣಗಳು ಹೇಗೆ ಚದುರುತ್ತವೆ ಎಂಬುದರ ಸಂಶೋಧನೆ ಮಾಡುತ್ತಿದ್ದರು. 1960ರಲ್ಲಿ ಅವರು ವಾಯುಮಂಡಲದ ಅಧ್ಯಯನದಲ್ಲಿ ತೊಡಗಿದರು. ನೆಲದಿಂದ 45 ಕಿಲೊಮೀಟರ್ ಎತ್ತರಕ್ಕೆ ಬಲೂನ್ ಹಾರಿಸಿ ಅಲ್ಲಿನ ವಾತಾವಣದಲ್ಲಿ ಓಝೋನ್ ಅನಿಲದ ಸಾಂದ್ರತೆಯನ್ನು ಅಳೆದರು. ಅದುವರೆಗೆ ಯುರೋಪ್, ಅಮೆರಿಕದ ಯಾರಿಗೂ ಓಝೋನ್ ಅನಿಲದ ಬಗ್ಗೆ ಅಷ್ಟಾಗಿ ಗೊತ್ತೇ ಇರಲಿಲ್ಲ. ಕ್ರಮೇಣ ಅಣ್ಣಾಮಣಿ ವಾಯುಮಂಡಲದ ತಜ್ಞೆ ಎನಿಸಿಕೊಂಡರು. ನೂರಕ್ಕೂ ಹೆಚ್ಚು ಬಗೆಯ ಉಪಕರಣಗಳನ್ನು ಅವರು ರೂಪಿಸಿ, ನಮ್ಮ ದೇಶದ ಹೆಮ್ಮೆಯ 'ಪವನ ವಿಜ್ಞಾನಿ' ಎನ್ನಿಸಿಕೊಂಡರು. ಅವರಿಗೆ ಅಂತಾರರಾಷ್ಟ್ರೀಯ ಓಝೋನ್ ಆಯೋಗದ ಪದಕವನ್ನೂ ನೀಡಲಾಯಿತು. ಅವರು ನಿಧನರಾಗಿದ್ದೂ ಆಗಸ್ಟ್ ತಿಂಗಳಲ್ಲೇ (16.08.2001).

# ಕಕ್ಷೆಯಲ್ಲಿ ಕೃತಕ ಸೂರ್ಯಗ್ರಹಣ



ಕುರುಕ್ಷೇತ್ರ ಯುದ್ಧದಲ್ಲಿ ಶ್ರೀಕೃಷ್ಣ ತನ್ನ ಚಕ್ರವನ್ನು ಪ್ರಯೋಗಿಸಿ ಸೂರ್ಯನನ್ನು ಮರೆಮಾಡಿದ್ದ ಕತೆ ನಮಗೆ ಗೊತ್ತೇ ಇದೆ. ಅಂಥದ್ದನ್ನೇ ಇಂದಿನ ವಿಜ್ಞಾನಿಗಳೂ ಮಾಡಿದ್ದಾರೆ. ಯುರೋಪ್ ಬಾಹ್ಯಾಕಾಶ ಸಂಘದವರು 'ಪ್ರೋಬಾ-3' ಹೆಸರಿನ ಒಂದು ಜೋಡಿ ಉಪಗ್ರಹಗಳನ್ನು ಭೂಮಿಯ ಕಕ್ಷೆಯಲ್ಲಿ ಸುತ್ತಿಸುತ್ತಿದ್ದಾರೆ. ಅವು ಒಂದಕ್ಕೊಂದು ಅಂಟಿಕೊಂಡ ಹಾಗೆ ಅಂದರೆ ಪರಸ್ಪರ ಒಂದೂವರೆ ಕಿ.ಮೀ. ಅಂತರವನ್ನು ಕಾಯ್ದುಕೊಂಡೇ ಚಲಿಸುತ್ತವೆ. ಸೂರ್ಯನಿಗೆ ಮುಖಕೊಟ್ಟು ಚಲಿಸುತ್ತಿರುವ ಮೊದಲ ಉಪಗ್ರಹ ತನ್ನ ಬೆನ್ನಿಗೆ ಕಟ್ಟಿಕೊಂಡಿದ್ದ ಛತ್ರಿಯನ್ನು ಬಿಚ್ಚುತ್ತದೆ. ಸೂರ್ಯನ ಬಿಂಬಕ್ಕೆ ಸರಿಯಾಗಿ ಅದು ಹೊಂದಿಕೊಂಡ ಕ್ಷಣದಲ್ಲಿ ಹಿಂದೆ ಬರುತ್ತಿರುವ ಎರಡನೇ ಉಪಗ್ರಹಕ್ಕೆ ಅದು ಪೂರ್ಣಗ್ರಹಣದ ಹಾಗೆ ಕಾಣಿಸುತ್ತದೆ. ಆ ಕ್ಷಣಕ್ಕೆ ಒಂದು ಫೋಟೊ ಕ್ಲಿಕ್ ಆಗಿ ಭೂಮಿಗೆ ರವಾನೆಯಾಗುತ್ತದೆ. ಅದು ಸೂರ್ಯಗ್ರಹಣದ ಹಾಗೇ ಕಾಣುತ್ತದೆ. (ಕ್ಯಾಮರಾಕ್ಕೆ ವಿಶೇಷ ಫಿಲ್ಟರ್ ಹಾಕಿದ್ದರಿಂದ ಚಿತ್ರದಲ್ಲಿ ಬಣ್ಣದ ಕಿರಣಗಳು ಕಾಣುತ್ತಿವೆ)

ಸೂರ್ಯನಿಂದ ಹೊಮ್ಮುವ ಜ್ವಾಲೆಗಳ ಅಧ್ಯಯನ ಮಾಡಲು ವಿಜ್ಞಾನಿಗಳಿಗೆ ಭಾರೀ ಆಸಕ್ತಿ ಇರುತ್ತದೆ. ಆದರೆ ನೇರವಾಗಿ ಹಗಲೆಲ್ಲ ಜ್ವಾಲೆಯನ್ನು ನೋಡಲು ಸಾಧ್ಯವಿಲ್ಲ. ಏಕೆಂದರೆ ಸೂರ್ಯ ಅಷ್ಟು ಪ್ರಖರವಾಗಿ ಉರಿಯುತ್ತಿರುತ್ತಾನೆ. ಅವನಿಗೆ ಗ್ರಹಣ ಆದಾಗ ಮಾತ್ರ ನೋಡಬಹುದು. ಆದ್ದರಿಂದಲೇ ಭೂಮಿಯ ಮೇಲೆ ಎಲ್ಲೇ ಸೂರ್ಯಗ್ರಹಣ ಆದಾಗಲೂ ವಿಜ್ಞಾನಿಗಳು ತಮ್ಮ ಉಪಕರಣಗಳನ್ನು ಹೊತ್ತು ಅಲ್ಲಿಗೆ ಧಾವಿಸುತ್ತಿದ್ದರು. ಈಗ ಬೇಕೆಂದಾಗ ಸೂರ್ಯಗ್ರಹಣದ ಚಿತ್ರವನ್ನು ಕಕ್ಷೆಯಿಂದಲೇ ಪಡೆಯಬಹುದು. ಕಳೆದ ಜೂನ್ ತಿಂಗಳಲ್ಲಿ ಅಂಥ ಒಂದು ಕೃತಕ ಗ್ರಹಣದ ಚಿತ್ರವನ್ನು ಅವರು ಪಡೆದಿದ್ದಾರೆ. ಭೂಮಿಯ ಮೇಲೆ ವರ್ಷಕ್ಕೊಮ್ಮೆ ಕಾಣುವ ಸೂರ್ಯಗ್ರಹಣ ಕೆಲವೇ ನಿಮಿಷಗಳಲ್ಲಿ ಕಣ್ಮರೆ ಆಗುತ್ತದೆ. ಕಕ್ಷೆಯ ಈ ಗ್ರಹಣ ಹಾಗಲ್ಲ. ಪ್ರೋಬಾ-3 ಸಾಧನ ಪ್ರತಿ 20 ಗಂಟೆಗಳಿಗೊಮ್ಮೆ; ಸತತ ಆರು ಗಂಟೆಗಳ ಕಾಲ ಪೂರ್ಣಗ್ರಹಣದ ಸ್ಥಿತಿಯಲ್ಲೇ ಇರುವಂತೆ ಚಿತ್ರ ತೆಗೆಯಬಹುದು.

ಯುರೋಪ್‌ನ ಖಗೋಲವಿಜ್ಞಾನಿಗಳ ಈ ಸಾಧನೆಯಲ್ಲಿ ಭಾರತದ್ದೂ ಕೊಡುಗೆ ಇದೆ. ಹೇಗೆ ಗೊತ್ತೆ? ಈ ಪ್ರೋಬಾ ಜೋಡಿ ಉಪಗ್ರಹಗಳನ್ನು ನಮ್ಮ ಇಸ್ರೊ ಸಂಸ್ಥೆಯ ಪಿಎಸ್‌ಎಲ್‌ವಿ ರಾಕೆಟ್ ಮೂಲಕವೇ ಕಳೆದ ಡಿಸೆಂಬರ್ 5ರಂದು ಶ್ರೀಹರಿಕೋಟಾದಿಂದ ಹಾರಿ ಬಿಡಲಾಗಿತ್ತು.

## ಪರಿಸರಸ್ನೇಹಿ ರಕ್ಷಾ ಬಂಧನ

ರಕ್ಷಾ ಬಂಧನ (ಈ ವರ್ಷ ಆಗಸ್ಟ್ 8-9) ಬಂತೆಂದರೆ ಎಲ್ಲೆಲ್ಲೂ ರಾಖೀಸೂತ್ರಗಳದ್ದೇ ದರ್ಬಾರು. ನಾನಾ ಬಗೆಯ, ನಾನಾ ವಿನ್ಯಾಸಗಳ ರಾಶಿರಾಶಿ ಪ್ಲಾಸ್ಟಿಕ್ ರಾಖಿಗಳು ಮಾರುಕಟ್ಟೆಗೆ ಲಗ್ಗೆ ಇಡುತ್ತಿವೆ. ಆಗಸ್ಟ್ 10ರ ನಂತರ, ಕೆಲವು ವಾರಗಳವರೆಗೆ ಎಲ್ಲೆಲ್ಲೂ ಕಸದ ತಿಪ್ಪೆಗಳಲ್ಲಿ ಅವೇ ಮಿನುಗುತ್ತಿರುತ್ತವೆ. ಮುಗ್ಧ ಹಸು, ನಾಯಿಗಳ ಹೊಟ್ಟೆಗೂ ಹೋಗುತ್ತವೆ. ಇಂಥ ಪ್ಲಾಸ್ಟಿಕ್ ರಾಖಿಗಳ ಬದಲು ಪರಿಸರಸ್ನೇಹಿ, ಅರಿಶಿಣಲೇಪಿತ ಸಾದಾ ದಾರಗಳನ್ನು ಕಟ್ಟುವ ಸಂಪ್ರದಾಯವೂ ಅಲ್ಲಲ್ಲಿ ಜಾರಿಗೆ ಬರುತ್ತಿದೆ. ಪೃಥ್ವಿಯ ರಕ್ಷಣೆಯನ್ನು ಹಾರೈಸಿ ಅನೇಕ ಹುಡುಗಿಯರು ಕಳೆದ ವರ್ಷ ಗಿಡಮರಗಳಿಗೇ ರಾಖಿ ಕಟ್ಟಿದ್ದೂ ಉಂಟು. ರಾಖಿಯಲ್ಲಿ ಪ್ಲಾಸ್ಟಿಕ್ ಮುತ್ತಿನ ಮಣಿಗಳ ಬದಲಿಗೆ ಜೀವಂತ ಬೀಜಗಳನ್ನು ಜೋಡಿಸಿಯೂ ಕಟ್ಟಬಹುದು. ಮುಂದೆ ಅದು ಗಿಡವಾಗಿ ಬೆಳೆದೀತು, ಇಲ್ಲವೇ ಇನ್ನೊಂದು ಜೀವಿಗೆ ಆಹಾರವಾದೀತು.


ಪರಿಸರ ಸ್ನೇಹಿ ರಕ್ಷಾ ಬಂಧನ ದಿನ ಇನ್ನೊಂದು ಕೆಲಸವನ್ನು ಪ್ರಾರಂಭಿಸಬಹುದು. ರಸ್ತೆಯಂಚಿಗೆ ಕಳೆದ ವರ್ಷ ನೆಟ್ಟಿದ್ದ ಗಿಡಗಳು ಅಲ್ಲಲ್ಲಿ ಮುರಿದು ಬಿದ್ದಿರುತ್ತವೆ ಇಲ್ಲವೆ ಅವುಗಳ ಸುತ್ತಲಿನ ರಕ್ಷಾಬೇಲಿ (ಟ್ರೀಗಾರ್ಡ್) ಗಳು ಮುರಿದು ಬಿದ್ದಿರುತ್ತವೆ. ಅಂಥವನ್ನು ಹುಡುಕಿ ಅವುಗಳನ್ನು ಮತ್ತೆ ಎತ್ತಿ, ದಾರ ಕಟ್ಟಿ, ಆಧಾರ ಕೊಟ್ಟು "ರಕ್ಷಾ ಬಂಧನ" ಮಾಡಬೇಕು. ಗಿಡವೇ ಅಲ್ಲಿ ಮಾಯವಾಗಿದ್ದರೆ ಬೇರೆ ಗಿಡ ಇಲ್ಲವೇ ಬೀಜವನ್ನು ಆ ಖಾಲಿ ಸ್ಥಳದಲ್ಲಿ ಊರಬೇಕು.

## ಸ್ವಾತಂತ್ರ್ಯದ ಹಕ್ಕು ಮತ್ತು ಕರ್ತವ್ಯ




ಆಗಸ್ಟ್ 15 ಅಂದರೆ ನಮ್ಮ ಸ್ವಾತಂತ್ರ್ಯದ ಬಗ್ಗೆ, ನಮ್ಮ ಹಕ್ಕುಗಳ ಬಗ್ಗೆ ಹೆಮ್ಮೆ ಪಡುವ ದಿನ. ಹಕ್ಕು ಇದೆ ಎಂದ ಮಾತ್ರಕ್ಕೆ, ಪ್ಲಾಸ್ಟಿಕ್ಕಿನ ಪುಟ್ಟ ಪುಟ್ಟ ಧ್ವಜಗಳನ್ನು ಹಿಡಿದು ಓಡಾಡಿ ಮರುದಿನ ಕಸದ ತೊಟ್ಟಿಗೆ ಬಿಸಾಕಬಹುದೆ? ಇಲ್ಲ. ಹಕ್ಕುಗಳ ಜೊತೆಗೆ ಕರ್ತವ್ಯವನ್ನೂ ನಾವು ಪಾಲಿಸಬೇಕು. ಭಾರತದ ಸಂವಿಧಾನದ (ಕಲಮು 51 ಎ) ಪ್ರಕಾರ ನಮ್ಮ ಪರಿಸರವನ್ನು, ನೀರು, ಮಣ್ಣು, ಗಾಳಿಯನ್ನು ಚೊಕ್ಕಟ ಇಡುವುದು ನಮ್ಮ ಕರ್ತವ್ಯವಾಗಿದೆ. ಪ್ಲಾಸ್ಟಿಕ್ ಧ್ವಜ ಮತ್ತು ಅದಕ್ಕೆ ಸಿಕ್ಕಿಸಿದ ಪ್ಲಾಸ್ಟಿಕ್ ಕಡ್ಡಿ ಇವೆಲ್ಲ ಮಾಲಿನ್ಯ ಉಂಟುಮಾಡುತ್ತವೆ. ಹಳ್ಳ-ನದಿಗಳಿಗೆ ಸೇರಿ ಜೀವಿಗಳ ಬದುಕಿಗೆ ಸಂಕಟ ತರುತ್ತವೆ. ಸುಟ್ಟರೆ ವಿಷಗಾಳಿಯನ್ನು ಹಬ್ಬಿಸಿ ಎಲ್ಲರಿಗೂ ತೊಂದರೆ ಕೊಡುತ್ತವೆ. ರಾಷ್ಟ್ರಭಕ್ತಿ ನಮ್ಮಲ್ಲಿರಬೇಕು. ಆದರೆ ಅದು ರಾಷ್ಟ್ರದ ಒಳಿತಿಗೆ ಮಾರಕ ಆಗಬಾರದು.

## ಜಗತ್ತಿನ ಅತಿ ಎತ್ತರದ ರೇಲ್ವೆ ಸೇತುವೆ



ಚಿನಾಬ್ ರೇಲ್ವೇ ಬ್ರಿಜ್! ಈ ಹೆಸರನ್ನು ಮರೆಯಬೇಡಿ. ಇದು ಜಗತ್ತಿನ ಅತಿ ಎತ್ತರದ ರೇಲ್ವೆ ಸೇತುವೆ ಎಂದು ಈಗಷ್ಟೇ ಖ್ಯಾತಿ ಪಡೆದಿದೆ. ಇದು ಜಮ್ಮು ಕಾಶ್ಮೀರದ ಮೂಲಕ ಹರಿಯುವ ಚಿನಾಬ್ (ಇಂಗ್ಲಿಷ್‌ನಲ್ಲಿ ಅದು Chenab) ನದಿಯ ಪಾತ್ರದಿಂದ 359 ಮೀಟರ್ ಎತ್ತರದಲ್ಲಿದೆ. ಅಂದರೆ, ಪ್ಯಾರಿಸ್ಸಿನ ಐಫೆಲ್ ಟವರ್‌ಗಿಂತಲೂ 35 ಮೀಟರ್ ಎತ್ತರ! ಅದಕ್ಕೆ 25 ಸಾವಿರ ಟನ್ ಉಕ್ಕಿನ ಕಂಬಿಗಳನ್ನು ಬಳಸಲಾಗಿದೆ. 2022ರ ಆಗಸ್ಟ್ 13ರಂದೇ ಇದರ ನಿರ್ಮಾಣ ಮುಗಿದು ಉದ್ಘಾಟನೆ ಕೂಡ ಆಗಿತ್ತು. ಆದರೆ ಮೂರು ವರ್ಷ ಇದರ ಸುರಕ್ಷತೆಯ ಪರೀಕ್ಷೆ ನಡೆಸಲಾಯಿತು. ಅಷ್ಟೆತ್ತರದಲ್ಲಿ ಬೀಸುವ ಭಾರೀ ಗಾಳಿಯನ್ನು ಮತ್ತು ಭೂಕಂಪನವನ್ನೂ ಸಹಿಸಿಕೊಂಡು ನಿಂತಿರಬೇಕಲ್ಲ?
ಅವೆಲ್ಲ ಪರೀಕ್ಷೆ ಮುಗಿದು ಕಳೆದ ಜೂನ್ 6ರಂದು ಪ್ರಧಾನ ಮಂತ್ರಿ ಮೋದಿಯವರು ಅದರ ಮೇಲೆ ಚಲಿಸುವ ರೈಲಿಗೆ ಮೊದಲ ಹಸಿರು ಬಾವುಟ ಬೀಸಿದರು. ಅತ್ಯಂತ ಕ್ಲಿಷ್ಟ ಎಂಜಿನಿಯರಿಂಗ್ ಸವಾಲುಗಳನ್ನು ಎದುರಿಸಿ ಅದು ನಮ್ಮ ದೇಶದ ಹೆಮ್ಮೆಯ ಸಾಧನೆಯಾಗಿ ತಲೆಯೆತ್ತಿ ನಿಂತಿದೆ.

# ಅನಂತವಾದ ಚೈತನ್ಯ !!

ಶ್ರೀ ತೋಂಟದಾರ್ಯ
ವಿಧಾನಪರಿಷತ್ತಿನ ಮಾಜಿ ಸದಸ್ಯರು,






ನನಗೆ ಶ್ರೀ ಅನಂತಕುಮಾರ್ ಅವರ ಪರಿಚಯವಾದದ್ದು ಭಾರತೀಯ ಜನತಾ ಪಾರ್ಟಿಯಿಂದ. ನಾನು ಮೊದಲೇ ಬಿಜೆಪಿಯಲ್ಲಿದ್ದೆ. ನಂತರ ಬಂದವರು ಅನಂತಕುಮಾರ್ ಅವರು. ಅವರು ಸಾಧಾರಣ ಕಾರ್ಯಕರ್ತರಾಗಿದ್ದವರು ನಂತರ ತಮ್ಮ ಕೆಲಸ ಹಾಗೂ ಚಾಣಾಕ್ಷತನದಿಂದಾಗಿ ಕೆಲವೇ ಸಮಯದಲ್ಲಿ ರಾಜ್ಯಮಟ್ಟದ ಜವಾಬ್ದಾರಿ ವಹಿಸಿಕೊಂಡರು ಎಂದರೆ ಅವರ ಕೆಲಸದ ಬಗೆಗಿನ ಬದ್ಧತೆ ಎಂತಹುದು ಎಂಬುದು ಅರ್ಥವಾಗುತ್ತದೆ. ಅವರು ರಾಜ್ಯ ಬಿಜೆಪಿ ಯುವಮೋರ್ಚಾ ಅಧ್ಯಕ್ಷರಾದರು.

ನಾನು ಮೂಲತಃ ಜನಸಂಘದಿಂದ ಬಂದವನು. ನಾನು ಬಿಜೆಪಿಯ ಅವಿಭಜಿತ ಮೈಸೂರು ಜಿಲ್ಲಾ ಅಧ್ಯಕ್ಷನಾಗಿದ್ದಾಗ ಅವರು ರಾಜ್ಯದ ಕಾರ್ಯದರ್ಶಿಯಾದರು, ನಂತರ ಯುವಮೋರ್ಚಾ ಅಧ್ಯಕ್ಷರಾದರು. ಅವರು ಯುವಮೋರ್ಚಾ ಅಧ್ಯಕ್ಷರಾದಾಗ ನನಗೆ ಮೈಸೂರು ನಗರದ ಜವಾಬ್ದಾರಿ ಇತ್ತು.

೧೯೯೩ರ ಸೆಪ್ಟೆಂಬರ್ ೧೧ರಂದು ರಾಜ್ಯದಲ್ಲಿ 'ಜನಾದೇಶ ಯಾತ್ರೆ' ಆಯೋಜನೆಗೊಂಡಿತ್ತು. ಅದು ಮಾನ್ಯ ಲಾಲ್‌ಕೃಷ್ಣ ಅದ್ವಾನಿಯವರ ನೇತೃತ್ವದಲ್ಲಿ ಮೈಸೂರಿನಿಂದ ಆರಂಭವಾಯಿತು. ಕೇವಲ ಎಂಟು-ಒಂಭತ್ತು ದಿನಗಳಲ್ಲಿ ಆ ಕಾರ್ಯಕ್ರಮವನ್ನು ನಾವು ರೂಪಿಸಬೇಕಾಗಿತ್ತು. ನಮ್ಮ ಕಾರ್ಯಕರ್ತರ ನಿರಂತರ ಪರಿಶ್ರಮ ಹಾಗೂ ಸಹಕಾರದಿಂದಾಗಿ ಅದು ಯಶಸ್ವಿಯಾಯಿತು. ಆನಂತರ ೧೯೯೪ರ ವಿಧಾನಸಭಾ ಚುನಾವಣೆ ನಡೆಯಿತು, ಅದರಲ್ಲಿ ಶ್ರೀ ಅನಂತಕುಮಾರ್ ಅವರ ಪಾತ್ರ ದೊಡ್ಡದಿತ್ತು. ಮಾನ್ಯ ಶ್ರೀ ಬಿ.ಎಸ್ ಯಡಿಯೂರಪ್ಪನವರ ಸಹಯೋಗದೊಂದಿಗೆ ಅತ್ಯುತ್ತಮವಾಗಿ ಕಾರ್ಯಕ್ರಮಗಳು ಯೋಜಿತವಾಗುತ್ತಿದ್ದವು. ಆಗ ಮೈಸೂರಿನ ಜವಾಬ್ದಾರಿಯನ್ನು ನಾನು, ಶ್ರೀ ಗೋ ಮಧುಸೂದನ ಹಾಗೂ ದಿ. ಶ್ರೀ ಅನಂತಶೆಟ್ಟಿ ಒಟ್ಟಾಗಿ ನಿರ್ವಹಿಸಿದ್ದೆವು. ಆ ಸಮಯದಲ್ಲಿ ನಾನು ಯಾವುದಾದರೂ ವಿಷಯವನ್ನು ಶ್ರೀ ಅನಂತಕುಮಾರ್ ಅವರಿಗೆ ತಿಳಿಸಿದರೆ, ಅದನ್ನು ಅವರು ಪರ್ಯಾಯವನ್ನೂ ಯೋಚಿಸದೆ ಅನುಷ್ಠಾನಗೊಳಿಸುತ್ತಿದ್ದರು. ನಮ್ಮ ನಡುವೆ ಅಂತಹ ಬಾಂಧವ್ಯ ಬೆಳೆದಿತ್ತು.

ಆ ಸಂದರ್ಭದಲ್ಲಿ ಶ್ರೀ ಎಸ್.ಎ. ರಾಮದಾಸ್ ಅವರು ಆಗತಾನೆ ರಾಜಕೀಯ ಪ್ರವೇಶ ಮಾಡಿ ಬಿಜೆಪಿಗೆ ಬಂದಿದ್ದರು. ಅವರನ್ನು ಮೈಸೂರು ನಗರದ ಯುವಮೋರ್ಚಾ ಅಧ್ಯಕ್ಷರನ್ನಾಗಿ ನೇಮಕ ಮಾಡಲು ನಾನು ಅನಂತಕುಮಾರ್ ಅವರನ್ನು ಕೋರಿದಾಗ, ಅವರು ಆಗ ನಡೆಯುತ್ತಿದ್ದ ಒಂದು ಸಭೆಯಲ್ಲೇ ಈ ಬಗ್ಗೆ ಘೋಷಣೆ ಮಾಡಿದರು. ಅವರಿಗೆ ನನ್ನ ಬಗ್ಗೆ ಅಂತಹ ವಿಶ್ವಾಸ ಹಾಗೂ ಗೌರವವಿತ್ತು.

೧೯೯೪ರ ಚುನಾವಣೆಯ ಸಮಯದಲ್ಲಿ ನಾವು ಹೇಳಿದ ಮೂರು ಜನರಿಗೆ ಮೈಸೂರಿನ ಮೂರು ಕ್ಷೇತ್ರದ ಭಾಜಪ ಅಭ್ಯರ್ಥಿಗಳನ್ನಾಗಿ ಕಣಕ್ಕಿಳಿಸಲಾಯಿತು. ಅವರೆಂದರೆ ಶ್ರೀ ಎಸ್‌ಎ ರಾಮದಾಸ್, ಶ್ರೀ ಎಚ್‌ಎಸ್ ಶಂಕರಲಿಂಗೇಗೌಡ ಹಾಗೂ ಶ್ರೀ ಮಾರುತಿರಾವ್ ಪವಾರ್ ಅವರು. ಹೀಗೆ ಟಿಕೆಟ್ ನೀಡುವಲ್ಲಿ ಶ್ರೀ ಅನಂತಕುಮಾರ್ ಅವರ ಪಾತ್ರ ಮಹತ್ವದ್ದಾಗಿತ್ತು. ೧೯೯೪ ಚುನಾವಣೆಯಲ್ಲಿ ಮೈಸೂರಿನ ಮೂರೂ ಕ್ಷೇತ್ರಗಳಲ್ಲಿ ಭಾಜಪ ಜಯ ದಾಖಲಿಸಿತು. ಇದು ನಮಗೆ ಹೆಮ್ಮೆಯನ್ನು ತಂದಿತು. ನಂತರ ನಡೆದ ಮೈಸೂರು ಮಹಾನಗರಪಾಲಿಕೆ ಚುನಾವಣೆಯಲ್ಲಿ ನಮ್ಮ ಪಕ್ಷ ೨೫ ಸ್ಥಾನಗಳನ್ನು ಗೆದ್ದಿತು. ಇದರಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಶ್ರೀ ಅನಂತಕುಮಾರ್ ಅವರು ಸ್ಥಾನೀಯರ ಅಭಿಪ್ರಾಯಗಳಿಗೆ ಎಷ್ಟು ಮಹತ್ವ ನೀಡುತ್ತಿದ್ದರು ಎಂಬುದು.

೧೯೯೪ರ ವಿಧಾನಸಭಾ ಚುನಾವಣೆಯಲ್ಲಿ ಭಾಜಪ ೪೦ ಶಾಸಕರನ್ನು ಹೊಂದುವಂತಾಯಿತು. ಅದರಿಂದ ಶ್ರೀ ಬಿಎಸ್ ಯಡಿಯೂರಪ್ಪ ವಿರೋಧಪಕ್ಷದ ನಾಯಕರಾಗುವಂತಾಯಿತು. ಆ ಸಮಯದಲ್ಲಿ ಪಕ್ಷದ ಎಲ್ಲಾ ತೀರ್ಮಾನಗಳನ್ನು ತ್ರಿಮೂರ್ತಿಗಳು ತೆಗೆದುಕೊಳ್ಳುತ್ತಿದ್ದರು. ಅವರೆಂದರೆ ಶ್ರೀ ಯಡಿಯೂರಪ್ಪ, ಶ್ರೀ ಅನಂತಕುಮಾರ್ ಹಾಗೂ ಶ್ರೀ ಕೆ. ಎಸ್. ಈಶ್ವರಪ್ಪ ಅವರು. ಇದನ್ನು ನಾವು ತ್ರಿಮೂರ್ತಿ (ಟ್ರಿಯೋ) ನಾಯಕತ್ವ ಎಂದು ಕರೆಯುತ್ತಿದ್ದೆವು. ಈ ರೀತಿಯ ಯಶಸ್ವಿ ತೀರ್ಮಾನ ತೆಗೆದುಕೊಳ್ಳುವ ಹಿಂದೆ ನಮ್ಮ ಶ್ರೀ ಅನಂತಕುಮಾರ್ ಅವರ ಬುದ್ಧಿಶಕ್ತಿ ಕೆಲಸ ಮಾಡುತ್ತಿತ್ತು. ಅವರು ರೂಪಿಸುತ್ತಿದ್ದ ಕಾರ್ಯಕ್ರಮಗಳನ್ನು ಶ್ರೀ ಯಡಿಯೂರಪ್ಪ ಸೇರಿದಂತೆ ಎಲ್ಲರೂ ಅಂತಃಕರಣದಿಂದ ಅನುಷ್ಠಾನಗೊಳಿಸುತ್ತಿದ್ದರು.

ಅಂದಿನ ಸಮಯದಲ್ಲಿ ಶಿವಮೊಗ್ಗದಲ್ಲಿ ಶ್ರೀ ಯಡಿಯೂರಪ್ಪನವರಿಗೆ ಒಂದು ಅಭಿನಂದನಾ ಸಮಾರಂಭ ಮಾಡಲು ತೀರ್ಮಾನಿಸಲಾಗಿತ್ತು. ಆ ಸಮಾರಂಭದಲ್ಲಿ ಸುಮಾರು ೪೦ ಸಾವಿರ ಜನರು ಭಾಗವಹಿಸಿದ್ದರು. ಆ ರೀತಿಯಲ್ಲಿ ಜಿಲ್ಲಾಮಟ್ಟದಲ್ಲಿ ನಡೆದ ಒಂದು ಅಭೂತಪೂರ್ವ ಕಾರ್ಯಕ್ರಮ ಅದಾಗಿತ್ತು. ಆ ಕಾರ್ಯಕ್ರಮದ ನಂತರ ನಾನು, ಶ್ರೀ ಯಡಿಯೂರಪ್ಪ, ಶ್ರೀ ಸಂಜೀವಣ್ಣ ಅವರು ಒಟ್ಟಾಗಿ ಶಿವಮೊಗ್ಗದಿಂದ ಹುಬ್ಬಳ್ಳಿಗೆ ತೆರಳಿದೆವು. ಹುಬ್ಬಳ್ಳಿಯಲ್ಲಿ ಶ್ರೀ ಅನಂತಕುಮಾರ್ ಅವರ ವಿವಾಹದ ಕಾರ್ಯಕ್ರಮವಿತ್ತು. ಅದಕ್ಕಾಗಿ ನಾವು ಹೊರಟಿದ್ದೆವು. ನನ್ನಮಟ್ಟಿಗೆ ವಿಶೇಷ ಎಂದರೆ ನಾನು ಶ್ರೀ ಅನಂತಕುಮಾರ್ ಅವರ ಮದುವೆಗೆ ಹಾಗೂ ಕೆಲ ವರ್ಷಗಳ ನಂತರ ನಡೆದ ಅವರ ಮಗಳ ಮದುವೆಗೂ ಸಾಕ್ಷಿಯಾದದ್ದು. ಇದನ್ನು ಅವರ ಮಗಳ ಮದುವೆಯ ಸಮಯದಲ್ಲಿ ಶ್ರೀ ವೆಂಕಯ್ಯನಾಯ್ಡು ಅವರೊಡನೆ ಮದುವೆ ಮನೆಯಲ್ಲಿ ಹಂಚಿಕೊಂಡಾಗ ಅವರು ಸಂತೋಷ ವ್ಯಕ್ತಪಡಿಸಿದ್ದರು. ಅಲ್ಲದೆ ಈ ವಿಷಯವನ್ನು ಶ್ರೀ ಅನಂತಕುಮಾರ್ ಅವರಿಗೂ ಹೇಳಿ ಸಂತಸಗೊಂಡಿದ್ದರು.

ಶ್ರೀ ಅನಂತಕುಮಾರ್ ಅವರ ಮದುವೆಯ ಸಮಯದ ವಿಶೇಷತೆ ಎಂದರೆ ಆಗ ನಮ್ಮ ಪಕ್ಷದ ರಾಜ್ಯ ಕಾರ್ಯಕಾರಿಣಿ ಸಭೆಯು ಅದರೊಡನೆ ನಡೆದಿದ್ದು. ಆಗ ಕಾರ್ಯಕರ್ತರ ಮದುವೆ ಮೊದಲಾದ ಶುಭ ಸಂದರ್ಭದಲ್ಲಿ ಹೀಗೆ ರಾಜ್ಯ ಕಾರ್ಯಕಾರಿಣಿ ಸಭೆಯು ಏರ್ಪಾಡಾಗುತ್ತಿತ್ತು. ಅದಕ್ಕೆ ಕಾರಣ ಮದುವೆ ಮನೆಯಾಗಿದ್ದರಿಂದ ಕಾರ್ಯಕಾರಿಣಿ ಸಭೆಯಲ್ಲಿ ಭಾಗವಹಿಸಿದವರಿಗೆ ಎರಡು ಊಟ, ತಿಂಡಿ ಮದುವೆ ಮನೆಯಲ್ಲಿಯೇ ಆಗುತ್ತಿತ್ತು ಎಂಬುದು. ಅಂದರೆ ಆಗ ನಮ್ಮ ಪಕ್ಷ ಅಷ್ಟು ಆರ್ಥಿಕವಾಗಿ ಬಲವಾಗಿರಲಿಲ್ಲ. ಶ್ರೀ ಅನಂತಕುಮಾರ್ ಅವರು ತೇಜಸ್ವಿನಿಯವರೊಡನೆ ವಿವಾಹವಾದರು. ಆಗ ನಮ್ಮ ಕಾರ್ಯಕಾರಿ ಸಮಿತಿ ಸಭೆ ಅಲ್ಲಿ ನಡೆದಿತ್ತು. ಆನಂತರ ಶ್ರೀ ಅನಂತಕುಮಾರ್ ಅವರು ಬೆಂಗಳೂರಿನ ಜಯಮಹಲ್‌ನಲ್ಲಿದ್ದ ವಿಧಾನ ಪರಿಷತ್ ಉಪ ಸಭಾಪತಿಯಾಗಿದ್ದ ಶ್ರೀ ಮಲ್ಲಿಕಾರ್ಜುನಯ್ಯನವರ ಮನೆಯಲ್ಲಿ ಇದ್ದುಕೊಂಡು ಪಕ್ಷದ ಕಾರ್ಯಚಟುವಟಿಕೆ ನಡೆಸುತ್ತಿದ್ದರು. ಈ ಎಲ್ಲಾ ಘಟನೆಗಳು ಈಗಲೂ ನನ್ನ ಮನದಲ್ಲಿ ಅಚ್ಚೊತ್ತಿದಂತೆ ಉಳಿದಿವೆ.

ಆ ಸಮಯದಲ್ಲಿ ನಮ್ಮ ಪಕ್ಷದ ಅಭ್ಯಾಸವರ್ಗಗಳಿಗೆ ವಿಶೇಷ ಆದ್ಯತೆ ನೀಡಲಾಗುತ್ತಿತ್ತು. ಅದರಲ್ಲೂ ವಿಶೇಷವಾಗಿ ನಮ್ಮ ದಲಿತ ಸಮಾಜದಿಂದ ಯಾರಾದರೂ ವಿದ್ಯಾವಂತರು ಪಕ್ಷಕ್ಕೆ ಬಂದರೆ ಪಕ್ಷವು ಬಹಳ ಸಂಭ್ರಮ ಪಡುತ್ತಿತ್ತು. ಹಾಗೆ ನೋಡಿದರೆ ಪಕ್ಷದ ಮುಖ್ಯ ನಿರ್ಮಾತೃ ಶ್ರೀ ಯಡಿಯೂರಪ್ಪ ನವರೇ ಆಗಿದ್ದರು. ಅವರು ಪಕ್ಷವನ್ನು ಇಡೀ ರಾಜ್ಯದಲ್ಲಿ, ಕೆಳಮಟ್ಟದಿಂದ ಕಟ್ಟಿ ಬೆಳೆಸಿದರು. ಅವರ ಹೋರಾಟಗಳೂ ಅಷ್ಟೇ ಶಿಸ್ತುಬದ್ಧವಾಗಿರುತ್ತಿತ್ತು. ಇದಕ್ಕೆ ಕಾರಣ ಶ್ರೀ ಅನಂತಕುಮಾರ್ ಅವರ ಚಿಂತನೆಯೂ ಕಾರಣವಾಗಿತ್ತು. ಅವರ ಕರ್ತೃತ್ವ ಹಾಗೂ ಬದ್ಧತೆ ಎಲ್ಲಡೆ ಕಾಣಿಸುತ್ತಿತ್ತು.

ಮುಂದೆ ಶ್ರೀ ಅನಂತಕುಮಾರ್ ಅವರು ಲೋಕಸಭಾ ಸದಸ್ಯರಾದರು. ಅವರು ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದರು. ಆ ಸಮಯದಲ್ಲಿ ಶ್ರೀ ಅಡ್ವಾಣಿ ಹಾಗೂ ಶ್ರೀ ಅಟಲ್ ಬಿಹಾರಿ ವಾಜಪೇಯಿಯವರಿಗೆ ಇವರು ಅತ್ಯಂತ ಹತ್ತಿರವಾದರು. ಇವರು ಒಂದು ರೀತಿಯಲ್ಲಿ ಶ್ರೀ ಅಡ್ವಾಣಿಯವರ ಮಾನಸ ಪುತ್ರ ಎನಿಸಿಕೊಂಡರು. ಶ್ರೀ ಅಡ್ವಾಣಿಯವರು ಇವರನ್ನು ಅನಂತಾ, ಅನಂತಾ ಎಂದೇ ಕರೆಯುತ್ತಿದ್ದರು. ಅವರಿಗೆ ತಕ್ಕ ಮಡದಿಯಾಗಿ ಶ್ರೀಮತಿ ತೇಜಸ್ವಿನಿಯವರು ಸಹಕಾರ ನೀಡಿದರು. ಶ್ರೀ ಅನಂತಕುಮಾರ್ ಅವರು ಲೋಕಸಭಾ ಸದಸ್ಯರಾಗಿ, ಕೇಂದ್ರದ ಮಂತ್ರಿಯಾಗಿ, ಪಕ್ಷ ವಹಿಸಿದ ವಿವಿಧ ಜವಾಬ್ದಾರಿಗಳನ್ನು ಅತ್ಯಂತ ಯಶಸ್ವಿಯಾಗಿ ನಿರ್ವಹಿಸಿ, ನಿಜವಾದ ದೇಶಭಕ್ತ ಎನಿಸಿಕೊಂಡರು. ಅವರಿಂದ ನಮ್ಮ ಪಕ್ಷಕ್ಕೆ, ಪಕ್ಷದ ಸಿದ್ಧಾಂತಕ್ಕೆ ಬಲಬಂದಿತು ಎಂದು ಹೇಳಬಹುದು.

ಶ್ರೀ ಅನಂತಕುಮಾರ್ ಅವರ ಬಗ್ಗೆ ಹೇಳಲು ಒಂದೆರಡು ಪುಟಗಳು ಸಾಕಾಗುವುದಿಲ್ಲ. ಭಾಜಪ ಹಾಗೂ ಪರಿವಾರದ ಎಲ್ಲ ಚಟುವಟಿಕೆಗಳಲ್ಲಿ ಅಂದಿಗೆ, ಇಂದಿಗೆ, ಎಂದೆಂದಿಗೂ ಅವರ ಪ್ರೇರಣಾಶಕ್ತಿಯನ್ನು ನೆನೆಯಲಾಗುತ್ತದೆ. ಅವರು ಗಳಿಸಿದ ಹೆಸರನ್ನು ಅವರ ಧರ್ಮಪತ್ನಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಈಗಲೂ ಮುಂದುವರೆಸಿಕೊಂಡು ಹೋಗುತ್ತಿರುವುದು ಸ್ತುತ್ಯರ್ಹ ಕಾರ್ಯವೇ ಆಗಿದೆ. ಅದು ಅನಂತವಾದ ಆನಂದದ ಸಂಗತಿ ಎಂದು ಹೇಳಬಹುದು. ◆

# ಜಿರಲೆ ಮಲ್ಲಮ್ಮ: 15ನೇ ಶತಮಾನದ ಅಪೂರ್ವ ಮಹಿಳೆ

-ಡಾ. ಕೆ. ಸಂಧ್ಯಾ

ಇತಿಹಾಸದ ಪುಟಗಳಲ್ಲಿ ಕೆಲವು ವ್ಯಕ್ತಿಗಳು ತಮ್ಮ ಅಸಾಧಾರಣ ಕೊಡುಗೆಗಳಿಂದಾಗಿ ಶಾಶ್ವತವಾಗಿ ಗುರುತಾಗಿರುತ್ತಾರೆ. ಜಿರಲೆ ಮಲ್ಲಮ್ಮ ಇಂತಹ ಒಬ್ಬ ಅಪೂರ್ವ ಮಹಿಳೆ. ಮಧುಗಿರಿಯಿಂದ ಸಿರಾಗೆ ಹೋಗುವ ದಾರಿಯಲ್ಲಿ ಗುಂಡ್ಲಹಳ್ಳಿಯ ಹತ್ತಿರವಿರುವ ಕುಡೂತಿಯಲ್ಲಿ ಕಂಡುಬರುವ 37 ಸಾಲಿನ ಶಾಸನವು, ಕ್ರಿ.ಶ. 1464ರಲ್ಲಿ ರಚಿತವಾಗಿ, ಕ್ರಿ.ಶ. 1593ರಲ್ಲಿ ಪ್ರತಿಮಾಡಲ್ಪಟ್ಟಿದ್ದು ಮಲ್ಲಮ್ಮನ ಜೀವನ ಮತ್ತು ಸಾಧನೆಗಳನ್ನು ಬೆಳಕಿಗೆ ತರುತ್ತದೆ.



### ದಾನಶೀಲತೆ ಮತ್ತು ದೂರದೃಷ್ಟಿಯ ಮಹಿಳೆ

ಶಾಸನವು ಮಲ್ಲಮ್ಮನ ವೈಯಕ್ತಿಕ ಜೀವನದ ವಿವರಗಳಾದ ಪತಿ ಅಥವಾ ಮಕ್ಕಳ ಬಗ್ಗೆ ಉಲ್ಲೇಖಿಸದಿದ್ದರೂ, ಅವಳ ಸಾಮಾಜಿಕ, ಧಾರ್ಮಿಕ ಕಾರ್ಯಗಳು, ಆಶಯಗಳು ಮತ್ತು ವಿಶಿಷ್ಟ ವ್ಯಕ್ತಿತ್ವವನ್ನು ವಿವರಿಸುತ್ತದೆ. ಮಲ್ಲಮ್ಮ ತನ್ನ ಕಾಲದಾಚೆಗೆ ತನ್ನ ದಾನಶೀಲತೆ ಮತ್ತು ದೂರದೃಷ್ಟಿಯಿಂದ ಸಮಾಜವನ್ನು ಉದ್ಧರಿಸಿದಳು. ಅವಳ ಪ್ರಮುಖ ಕೊಡುಗೆಗಳಲ್ಲಿ ಒಂದು ಕುಡೂತಿಯ ಕೋಟೆ ನಿರ್ಮಾಣಕ್ಕೆ ಸಂಬಂಧಿಸಿದೆ. ಗ್ರಾಮದ ಮುಖಂಡರಾದ ಕಂಬೇಗೌಡ, ಕರೇಗೌಡ, ರಾಯಣಗೌಡ, ರಂಗೇಗೌಡ ಮೊದಲಾದವರು ಈ ಕೋಟೆಯನ್ನು ಕಟ್ಟಿಸಲು 1,892 ವರಹಗಳ ಸಾಲವನ್ನು ತೆಗೆದುಕೊಂಡಿದ್ದರು. ಮಲ್ಲಮ್ಮ ಈ ಸಾಲವನ್ನು ತೀರಿಸಿ, ಗ್ರಾಮವನ್ನು ಆರ್ಥಿಕ ಒತ್ತಡದಿಂದ ಮುಕ್ತಗೊಳಿಸಿದಳು. ಇದರ ಜೊತೆಗೆ, 20 ವರಹ ಖರ್ಚುಮಾಡಿ ಕುಡೂತಿಯ ದೇವಾಲಯದ ಮುಂದೆ ನೆಲವನ್ನು ಸಮತಟ್ಟುಗೊಳಿಸಿ, ಮಣ್ಣು-ಕಲ್ಲಿನ ಕಾಮಗಾರಿಯನ್ನು ಮಾಡಿಸಿದಳು. ಈ ಕೆಲಸದಲ್ಲಿ ತೊಡಗಿದ್ದ ಯಂಗಟನಬೋವಿ, ರಾಮನಬೋವಿ, ತಿಂಮನಬೋವಿ ಮೊದಲಾದ ಕೆಲಸಗಾರರಿಗೆ 10 ವರಹಗಳನ್ನು ಉಡುಗೊರೆಯಾಗಿ ನೀಡಿದಳು. ಇದಲ್ಲದೆ, 9 ವರಹ ಖರ್ಚುಮಾಡಿ ಗ್ರಾಮದ ಸಮಸ್ತ ಜನರಿಗೆ ಸಂತರ್ಪಣೆಯನ್ನು ಏರ್ಪಡಿಸಿ, ಗುರುಗಳು ಮತ್ತು ಕೈವಾಡದವರು (ಗ್ರಾಮ ಸಹಾಯಕರು, ಸಾಮಾನ್ಯವಾಗಿ ಕೆಳವರ್ಗದ ಜನರು) ಸೇರಿದಂತೆ ಎಲ್ಲರಿಗೂ ದಾನ-ಧರ್ಮ ಮಾಡಿದಳು. ಇದು ಅವಳ ವಿಶಾಲ ಮನೋಭಾವವನ್ನು ತೋರಿಸುತ್ತದೆ.

### ವಾಸ್ತುಶಿಲ್ಪ ಮತ್ತು ಆಧ್ಯಾತ್ಮಿಕ ಕೊಡುಗೆ

ಮಲ್ಲಮ್ಮನ ಕೊಡುಗೆಗಳು ಕೇವಲ ಆರ್ಥಿಕ ವಿಷಯಕ್ಕೆ ಸೀಮಿತವಾಗಿರಲಿಲ್ಲ. ಅವಳು ಕಂಬದಯ್ಯ ಮತ್ತು ಗೋಪಾಲಕೃಷ್ಣ ದೇವಾಲಯಗಳನ್ನು ನಿರ್ಮಿಸಿದಳು ಮತ್ತು ಅವುಗಳ ಮುಂದೆ ಒಂದು ಸೋಪಾನದ ಬಾವಿಯನ್ನು ಕಟ್ಟಿಸಿದಳು. ಈ ಬಾವಿಯು ಪ್ರಯಾಣಿಕರಿಗೆ ಮತ್ತು ಸ್ಥಳೀಯರಿಗೆ ಸೇವೆ ಸಲ್ಲಿಸುವ ಉದ್ದೇಶವನ್ನು ಹೊಂದಿತ್ತು, ಇದು ಸಾರ್ವಜನಿಕ ಕಲ್ಯಾಣದ ಬಗ್ಗೆ ಅವಳ ಕಾಳಜಿಯನ್ನು ತೋರಿಸುತ್ತದೆ. ಬಾವಿಯ ಮೆಟ್ಟಿಲುಗಳ ಮೇಲಿರುವ ಎರಡು ಕಂಬಗಳಲ್ಲಿ ಒಂದರಲ್ಲಿ ತನ್ನ ಶಿಲ್ಪವನ್ನು ಕೆತ್ತಿಸಿದಳು. ವಿಶೇಷವಾಗಿ, ಬಾವಿಯ ನೀರನ್ನು ಕುಡಿಯುವವರು ತನ್ನ ಶಿಲ್ಪದ ಮೇಲೆ ಒಂದು ಬೊಗಸೆ ನೀರನ್ನು ಸುರಿಯಬೇಕೆಂಬ ಆಶಯವನ್ನು ಅವಳು ವ್ಯಕ್ತಪಡಿಸಿದಳು. ಇದರ ಜೊತೆಗೆ, ತನ್ನ ವಂಶಸ್ಥರ ಮನೆಯವರು ತಮ್ಮ ಮನೆಗಳಲ್ಲಿ ಹಸು ಅಥವಾ ಎಮ್ಮೆಗಳು ಕರು ಹಾಕಿದಾಗ, ಆ ಶಿಲ್ಪದ ತಲೆ ಮತ್ತು ಬಾಯಿಗೆ ಬೆಣ್ಣೆಯನ್ನು ಇಟ್ಟು ಪೂಜೆ ಮಾಡಬೇಕೆಂದು ಕೇಳಿಕೊಂಡಿದ್ದಾಳೆ. ಇದು ಅವಳ ವಿಶಿಷ್ಟ ಆಶಯವನ್ನು ತೋರಿಸುತ್ತದೆ.

### ಧಾರ್ಮಿಕ ಕಟ್ಟಳೆಗಳು ಮತ್ತು ಗ್ರಾಮ ಸಂಘಟನೆ

ಮಲ್ಲಮ್ಮ ತನ್ನ ಗ್ರಾಮವಾದ ಕುಡೂತಿಯ ಜೊತೆಗೆ ಪಕ್ಕದ ಸಿದ್ದಾಪುರ ಗ್ರಾಮದ ಜನರು ಒಟ್ಟಾಗಿ ದೇವಾಲಯದ ಪೂಜೆಯನ್ನು ನಡೆಸಬೇಕೆಂದು ಕಟ್ಟಳೆ ಹೊರಡಿಸಿದಳು. “ನೂರು ಮನೆಗಳ ಅಣ್ಣ ತಮ್ಮಂದಿರು ಕೂಡಿಕೊಂಡು ಎರಡೂ ಗ್ರಾಮಗಳವರು ಸರತಿಯಂತೆ ದೇವಾಲಯದ ಸೇವೆಯನ್ನು ಮಾಡಬೇಕು” ಎಂದು ಆದೇಶಿಸಿದಳು. ಗೋಪಾಲಕೃಷ್ಣ ದೇವರಿಗೆ ಯಂಗಟಪುರದ ವೈಷ್ಣವನೇ ಪೂಜಾರಿಯಾಗಿರಬೇಕು ಮತ್ತು ಗುಂಡ್ಲಹಳ್ಳಿಯ ಯಜಮಾನನೇ ಲಕ್ಷ್ಮೀದೇವಿಯ ಪೂಜಾರಿಯಾಗಿರಬೇಕೆಂದು ನಿಯುಕ್ತಿಗೊಳಿಸಿದಳು. ಹಣ್ಣು-ಹೂವಿನ ಸೇವೆಯನ್ನು ಯಾರು ಮಾಡಬೇಕೆಂದು ಸಹ ನಿರ್ದಿಷ್ಟವಾಗಿ ತಿಳಿಸಿದಳು. ಪೆನುಗೊಂಡೆ ಬಿಜ್ಜಾವರದ ತಿರುಮಲ ತಾತಾಚಾರಿಗಳು, ಹೊನ್ನೇಗೌಡ, ಮರಿತಿಮ್ಮನಹಳ್ಳಿಯ ದಾಸೇಗೌಡ ಈ ಮೂವರು ಗುರುಗಳಾಗಿದ್ದು, ಇವರ ಮಾತಿಗೆ ಯಾರೂ ಪ್ರತಿಹೇಳಬಾರದೆಂದು ಕಟ್ಟಳೆಯನ್ನು ವಿಧಿಸಿದಳು. ಈ ಕಟ್ಟಳೆಗಳು ಅವಳ ಆಡಳಿತಾತ್ಮಕ ಕೌಶಲ ಮತ್ತು ಸಮಾಜದ ಏಕತೆಗೆ ಅವಳ ಕೊಡುಗೆಯನ್ನು ತೋರಿಸುತ್ತವೆ.

### ಜಿರಲೆ ಮಲ್ಲಮ್ಮನ ಹೆಸರಿನ ಕುತೂಹಲ

‘ಜಿರಲೆ’ ಎಂಬ ಹೆಸರು ಕುತೂಹಲಕಾರಿಯಾಗಿದೆ. ಕೆಲವರ ಪ್ರಕಾರ, ಜಿರಲೆ ಎಂಬುದು ಅವಳ ತವರೂರಾಗಿರಬಹುದು, ಏಕೆಂದರೆ ಒಂದೇ ಹೆಸರಿನ ಹಲವರು ಇದ್ದಾಗ ಊರಿನ ಗುರುತಿನಿಂದ ಕರೆಯುವುದು ಸಾಮಾನ್ಯ. ಆದರೆ, ಈ ಊರಿನಲ್ಲಿ ಒಂದು ಐತಿಹ್ಯವು ಕೇಳಿಬರುತ್ತದೆ. ಮಲ್ಲಮ್ಮ ತನ್ನ ಹಸು-ಎಮ್ಮೆಗಳ ಹಾಲನ್ನು ಬೆಣ್ಣೆಯಾಗಿ ಮಾರಾಟ ಮಾಡಿ ಹಣ ಸಂಪಾದಿಸಿದ್ದಳಂತೆ. ಸಂಬಂಧಿಕರು ಬೆಣ್ಣೆ ಕೇಳಿದಾಗ, “ಜಿರಲೆ ಬಿದ್ದಿದೆ” ಎಂದು ಸುಳ್ಳು ಹೇಳಿ, ಸಂತೆಗೆ ಮಾರಾಟಕ್ಕೆ ಸಾಗಿಸುತ್ತಿದ್ದಳಂತೆ. ಈ ಐತಿಹ್ಯವು ‘ಜಿರಲೆ’ ಎಂಬ ಹೆಸರಿನ ಮೂಲವಾಗಿರಬಹುದು.

ಬಹುಶಃ, ಮಕ್ಕಳಿಲ್ಲದೆ ಈ ಶಾಸನ ರಚಿತವಾದ ಕಾಲಕ್ಕೆ ವಿಧವೆಯಾಗಿದ್ದಿರಬಹುದು. ಆದ್ದರಿಂದಲೇ ತನ್ನ ಆಸ್ತಿಯನ್ನು ಗ್ರಾಮದ ಒಳಿತಿಗಾಗಿ ಖರ್ಚುಮಾಡಿ, ತನ್ನ ಹಸು-ಎಮ್ಮೆಗಳನ್ನು ಸಂಬಂಧಿಕರಿಗೆ ಹಂಚಿದ್ದಾಳೆ. ತನ್ನ ಶಿಲ್ಪಕ್ಕೆ ಬೆಣ್ಣೆಯಿಂದ ಪೂಜೆ ಮಾಡಬೇಕೆಂದು ಕೇಳಿಕೊಂಡಿರುವುದು ಇದಕ್ಕೆ ಸಾಕ್ಷಿಯಾಗಿದೆ.

### ಇಂದಿನ ದಿನದಲ್ಲಿ ಮಲ್ಲಮ್ಮನ ಶಿಲ್ಪ

ಮಧುಗಿರಿಯಿಂದ ಸಿರಾಗೆ ಹೋಗುವ ದಾರಿಯಲ್ಲಿ ಕುಡೂತಿಯ ಈ ದೇವಾಲಯಗಳು ಇಂದಿಗೂ ಸುಸ್ಥಿತಿಯಲ್ಲಿವೆ. ಕಂಬದಯ್ಯ ಮತ್ತು ಗೋಪಾಲಕೃಷ್ಣ ದೇವಾಲಯಗಳ ಮುಂದೆ ಸ್ವಲ್ಪ ಎಡಭಾಗದಲ್ಲಿ ಸಣ್ಣ ಕಲ್ಯಾಣಿಯೊಂದಿದೆ. ಈ ಕಲ್ಯಾಣಿಯ ಮೆಟ್ಟಿಲುಗಳ ಎರಡೂ ಬದಿಗಳ ಕಂಬಗಳಲ್ಲಿ ಒಂದರಲ್ಲಿ ಜಿರಲೆ ಮಲ್ಲಮ್ಮನ ಉಬ್ಬು ಶಿಲ್ಪವು ಭಕ್ತಿಯಿಂದ ಕೈಮುಗಿದು ನಿಂತಿರುವ ಭಂಗಿಯಲ್ಲಿದೆ.

### ಒಂದು ವಿಶಿಷ್ಟ ಆಶಯ

ಸಾಮಾನ್ಯ ಮಹಿಳೆಯಾಗಿದ್ದರೂ ಜಿರಲೆ ಮಲ್ಲಮ್ಮ ವಿಶೇಷ ವ್ಯಕ್ತಿತ್ವವನ್ನು ಹೊಂದಿದ್ದಳು. ತನ್ನ ಜಿಪುಣತನದಿಂದ ಸಂಪಾದಿಸಿದ ಹಣವನ್ನು ಸಮಾಜದ ಒಳಿತಿಗಾಗಿ ಸದ್ವಿನಿಯೋಗ ಮಾಡಿದಳು. ಧರ್ಮ, ಅರ್ಥ, ಕಾಮ, ಮೋಕ್ಷ ಎಂಬ ಚತುರ್ವಿಧ ಪುರುಷಾರ್ಥಗಳನ್ನು ತನ್ನ ಜೀವನದಲ್ಲಿ ಸಾಕಾರಗೊಳಿಸಿದ ಈ ಮಹಿಳೆ, ಸಾಮಾನ್ಯರಿಗೆ ಸದ್ಗತಿಯ ಬಯಕೆಗಿಂತ ವಿಶಿಷ್ಟವಾದ ಆಶಯವನ್ನು ಹೊಂದಿದ್ದಳು. ಜಿರಲೆ ಮಲ್ಲಮ್ಮನ ಕಥೆಯು ಇಂದಿಗೂ ಸ್ಫೂರ್ತಿಯಾಗಿದೆ, ಒಬ್ಬ ಸಾಮಾನ್ಯ ಮಹಿಳೆಯು ತನ್ನ ದಾನಶೀಲತೆ ಮತ್ತು ದೂರದೃಷ್ಟಿಯಿಂದ ಸಮಾಜದಲ್ಲಿ ಶಾಶ್ವತವಾದ ಗುರುತನ್ನು ಹೇಗೆ ಬಿಡಬಹುದು ಎಂಬುದಕ್ಕೆ ಸಾಕ್ಷಿಯಾಗಿದೆ. ◆



## ಅನಂತ ಪ್ರೇರಣಾ ಕೇಂದ್ರದಲ್ಲಿ ವಿಶ್ವ ಯೋಗ ದಿನಾಚರಣೆ



ಜೂನ್ 21 ರಂದು ಹುಬ್ಬಳ್ಳಿಯ ಅನಂತ ಪ್ರೇರಣಾ ಕೇಂದ್ರದಲ್ಲಿ ವಿಶ್ವ ಯೋಗ ದಿನವನ್ನು ಸಾಮೂಹಿಕವಾಗಿ ಆಚರಿಸಲಾಯಿತು. ಈ ಸಂದರ್ಭದಲ್ಲಿ ಶ್ರೀಮತಿ ಮಂಗಲಾ ನಾಡಕರಣಿ ಅವರು ಸಾರ್ವಜನಿಕರಿಗೆ ವಿವಿಧ ಯೋಗಾಸನಗಳನ್ನು ಮಾಡಿಸಿದರು. ಯೋಗ ದಿನಾಚರಣೆಯಲ್ಲಿ ಸಾರ್ವಜನಿಕರು ಉತ್ಸಾಹದಿಂದ ಭಾಗವಹಿಸಿ, ಯೋಗಾಭ್ಯಾಸದ ಮಹತ್ವವನ್ನು ಅರಿತುಕೊಂಡರು.

ಕಾರ್ಯಕ್ರಮದ ನಂತರ ದಂತ ಆರೋಗ್ಯ ಮತ್ತು ಜೀವನಶೈಲಿ ಸಲಹಾ ಕೇಂದ್ರಕ್ಕೆ ಚಾಲನೆ ನೀಡಲಾಯಿತು. ಈ ಕೇಂದ್ರದ ಮೂಲಕ ಮಕ್ಕಳಿಗೆ ಮತ್ತು ಸಾರ್ವಜನಿಕರಿಗೆ ಉಚಿತ ತಪಾಸಣೆ ನೀಡಲಾಗುತ್ತದೆ. ಪ್ರತಿ ಎರಡನೇ ಶನಿವಾರ ಡಾ. ಮನೋಜ್ ಭಟ್ ಅವರಿಂದ ಈ ತಪಾಸಣೆ ನಡೆಯುತ್ತದೆ.

## ಸಂಸ್ಕೃತ ಭಾರತಿ ಹುಬ್ಬಳ್ಳಿ ಮತ್ತು ಅನಂತ ಪ್ರೇರಣಾ ಕೇಂದ್ರದಿಂದ ಶ್ರೀ ಕೃಷ್ಣದೇವರಾಯ ಬಾಲಕೇಂದ್ರ ಶಿಬಿರ ಉದ್ಘಾಟನೆ:




ಹುಬ್ಬಳ್ಳಿ: 2025ರ ಜುಲೈ 5ರಂದು ಸಂಸ್ಕೃತ ಭಾರತಿ ಹುಬ್ಬಳ್ಳಿ ಮತ್ತು ಅನಂತ ಪ್ರೇರಣಾ ಕೇಂದ್ರದ ಸಹಯೋಗದಲ್ಲಿ ಶ್ರೀ ಕೃಷ್ಣದೇವರಾಯ ಬಾಲಕೇಂದ್ರ ಶಿಬಿರಕ್ಕೆ ಚಾಲನೆ ನೀಡಲಾಯಿತು. ಮಕ್ಕಳಲ್ಲಿ ಸಂಸ್ಕೃತ ಭಾಷೆ ಮತ್ತು ಭಾರತೀಯ ಸಂಸ್ಕೃತಿಯ ಬಗ್ಗೆ ಆಸಕ್ತಿ ಮೂಡಿಸುವ ಉದ್ದೇಶದಿಂದ ಈ ಶಿಬಿರವನ್ನು ಆಯೋಜಿಸಲಾಗಿದೆ. ಈ ವಿಶೇಷ ಶಿಬಿರದಲ್ಲಿ ಮಕ್ಕಳಿಗೆ ಸಂಸ್ಕೃತ ಸಂಭಾಷಣೆ, ಶ್ಲೋಕ ಪಠಣ, ಭಗವದ್ಗೀತೆ, ಸಂಸ್ಕೃತ ಗೀತೆಗಳು, ಭಜನೆ ಹಾಗೂ ವಿವಿಧ ಕ್ರೀಡೆಗಳನ್ನು ಪರಿಚಯಿಸಲಾಗುವುದು. ಆರು ತಿಂಗಳ ಅವಧಿಗೆ ನಡೆಯುವ ಈ ಶಿಬಿರವು ಪ್ರತಿ ಶನಿವಾರ ಸಂಜೆ ಕಾರ್ಯನಿರ್ವಹಿಸಲಿದೆ. ಮಕ್ಕಳು ತಮ್ಮ ವಾರಾಂತ್ಯಗಳನ್ನು ಸದುಪಯೋಗಪಡಿಸಿಕೊಳ್ಳಲು ಮತ್ತು ನಮ್ಮ ಪರಂಪರೆಯ ಶ್ರೀಮಂತಿಕೆಯನ್ನು ಪರಿಚಯಿಸಲು ಇದೊಂದು ಉತ್ತಮ ಅವಕಾಶವಾಗಿದೆ.

**ಇತರ ಚಟುವಟಿಕೆಗಳು:** ಅದಮ್ಯ ಚೇತನವು ಭಗವದ್ಗೀತಾ ಪಠಣ. ಶ್ರೀಚೇತನ ಸಭೆ, ಪ್ಲೇಟ್ ಬ್ಯಾಂಕ್ ಮುಂತಾದ ಕಾರ್ಯಕ್ರಮಗಳನ್ನು ನಿಯಮಿತವಾಗಿ ನಡೆಸಿಕೊಂಡು ಬರುತ್ತಿದೆ.

# ತಿಂಗಳ ವರದಿ
## ( ಜೂನ್ - ಜುಲೈ 2025)

**ಹಸಿರು ಭಾನುವಾರ:** ಅದಮ್ಯ ಚೇತನದ ಹಸಿರು ಭಾನುವಾರದ ಯೋಜನೆಯಡಿ, 495 ರಿಂದ 499ನೇ ಭಾನುವಾರಗಳವರೆಗೆ ವಿವಿಧ ಸ್ಥಳಗಳಲ್ಲಿ ಗಿಡ ನೆಡುವ ಕಾರ್ಯಕ್ರಮಗಳು ಯಶಸ್ವಿಯಾಗಿ ಜರುಗಿದವು. 495, 496, 497, 498 ಮತ್ತು 499 ಹಸಿರು ಭಾನುವಾರಗಳನ್ನು ಕ್ರಮವಾಗಿ, ಬೆಂಗಳೂರಿನ ಅಂಜನಾಪುರದ ಮಾನೆ ಇಕೋ ಸೊಸೈಟಿ ಮತ್ತು ನೈಸ್ ರಸ್ತೆ ಹತ್ತಿರದ ಹಸಿರು ಪರಿಸರದ ಆವರಣ, ಕರ್ನಾಟಕ ರಾಜ್ಯ ರೇಷ್ಮೆ ಕೃಷಿ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ, ಮೆಟ್ರೋ ಸಿಲ್ಕ್ ಇನ್ಸ್ಟಿಟ್ಯೂಟ್ ಸ್ಟಾಪ್ ಹತ್ತಿರದ ಆವರಣ, ಕೃಷ್ಣಪ್ಪನಗರ, ಹಾಲನಾಯಕನಹಳ್ಳಿ ಸರ್ಕಾರಿ ಆಸ್ಪತ್ರೆ ಆವರಣ, ಬೆಂಗಳೂರಿನ ಶ್ರೀ ಜಯಚಾಮರಾಜೇಂದ್ರ ಪಾಲಿಟೆಕ್ನಿಕ್ ಕಾಲೇಜು ಆವರಣ, ಬಿ ಪಿ ವಾಡಿಯ ರಸ್ತೆ ಅನಂತವನ ಆವರಣದಲ್ಲಿ ನಡೆಯಿತು. ಬಿಎಂಎಸ್ ಕಾಲೇಜು ವಿದ್ಯಾರ್ಥಿಗಳು, ಹಸಿರು ಯೋಧರು ಮೊದಲಾದವರು ಭಾಗವಹಿಸಿದ್ದರು.

## ಅನಂತ್ ಹಸಿರು ಜೀವನಶೈಲಿ ಸಂಪನ್ಮೂಲ ಕೇಂದ್ರ ಮತ್ತು ಪ್ಲೇಟ್ ಬ್ಯಾಂಕ್ ಉದ್ಘಾಟನೆ



ಜುಲೈ 19 ರಂದು ಬೆಂಗಳೂರಿನ ಯಲಹಂಕದ ವಿಶ್ವ ವಿದ್ಯಾಪೀಠ ಶಾಲೆಯಲ್ಲಿ ಪ್ಲೇಟ್ ಬ್ಯಾಂಕ್ ಮತ್ತು 'ಅನಂತ - ಹಸಿರು ಜೀವನಶೈಲಿ ಸಂಪನ್ಮೂಲ ಕೇಂದ್ರದ ಉದ್ಘಾಟನೆಯನ್ನು ನೆರವೇರಿಸಲಾಯಿತು. ವಿದ್ಯಾರ್ಥಿಗಳು, ಶಿಕ್ಷಕರು ಮತ್ತು ಪೋಷಕರಿಗೆ ಮಾತ್ರವಲ್ಲದೆ, ಸಮುದಾಯಕ್ಕೂ ಸುಸ್ಥಿರ ಜೀವನವನ್ನು ಬೆಂಬಲಿಸಲು ಮತ್ತು ಹಸಿರು ಜೀವನ ಶೈಲಿ ಪ್ರೋತ್ಸಾಹಿಸಲು ಈ ಕೇಂದ್ರ ಸಹಕಾರಿಯಾಗಿದೆ.

ಉದ್ಘಾಟನಾ ಸಮಾರಂಭದಲ್ಲಿ ನ್ಯಾ. ಎನ್. ಕುಮಾರ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಶ್ರೀಮತಿ ಸುಶೀಲ ಸಂತೋಷ್ ಮುಂತಾದ ಗಣ್ಯರು ಭಾಗವಹಿಸಿದ್ದರು. ಈ ಸಂಪನ್ಮೂಲ ಕೇಂದ್ರವು ಸಮುದಾಯದಲ್ಲಿ ಹಸಿರು ಜೀವನ ಶೈಲಿ ಮತ್ತು ಪರಿಸರ ಸ್ನೇಹಿ ಜೀವನಶೈಲಿಯನ್ನು ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ. ಈ ಉಪಕ್ರಮವು ಮುಂದಿನ ಪೀಳಿಗೆಗೆ ಉತ್ತಮ ಭವಿಷ್ಯವನ್ನು ನಿರ್ಮಿಸುವಲ್ಲಿ ಮಹತ್ವದ ಹೆಜ್ಜೆಯಾಗಿದೆ.

**ಬಿಲಾಸ್ಪುರದಲ್ಲಿ ಪ್ಲೇಟ್ ಬ್ಯಾಂಕ್ ಗೆ ಚಾಲನೆ:**
ಹಿಮಾಚಲ ಪ್ರದೇಶದ ಬಿಲಾಸ್ಪುರದಲ್ಲಿ, ಚೇತನಾ ಫೌಂಡೇಶನ್ ಹಾಗೂ ಅದಮ್ಯ ಚೇತನ ಸಂಸ್ಥೆಗಳ ಸಹಯೋಗದಲ್ಲಿ ಪ್ಲೇಟ್ ಬ್ಯಾಂಕ್ ಯೋಜನೆಗೆ ಚಾಲನೆ ನೀಡಲಾಯಿತು. ಈ ಸಂದರ್ಭದಲ್ಲಿ, ನಡ್ಡಾ ಕುಟುಂಬವು ತಮ್ಮ ತಂದೆ ಶ್ರೀ ನಾರಾಯಣ ಲಾಲ್ ನಡ್ಡಾ ಹಾಗೂ ತಾಯಿ ದಿವಂಗತ ಶ್ರೀಮತಿ ಕೃಷ್ಣಾ ನಡ್ಡಾ ಅವರ ಸ್ಮರಣಾರ್ಥವಾಗಿ 'ನಾರಾಯಣ ಕೃಷ್ಣ ಫೌಂಡೇಶನ್' ಅನ್ನು ಘೋಷಿಸಿತು. ಈ ಕಾರ್ಯಕ್ರಮದಲ್ಲಿಯೇ ಪ್ಲೇಟ್ ಬ್ಯಾಂಕ್ ಅನ್ನು ಮೊದಲ ಬಾರಿಗೆ ಉಪಯೋಗಿಸಲಾಯಿತು.

ಅನಂತಪಥ
Published by: Tejaswini Ananthkumar
For-Ananthkumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 | Email: ananth.path@akp.org.in
ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು: ಈ ಪಠ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
ಸೂಚನೆ: ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )



ಜುಲೈ 11ರಂದು ಅಭ್ಯುದಯ ಫೌಂಡೇಶನ್ ವತಿಯಿಂದ ಆಯೋಜಿಸಿದ್ದ 'ಒಂದು ರಾಷ್ಟ್ರ, ಒಂದು ಚುನಾವಣೆ' ಕುರಿತ ವಿಚಾರಗೋಷ್ಠಿಯಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದರು.




ಜುಲೈ 5 ಡಾ. ಪಿ ನಾರಾಯಣ್ ಅವರ ನಾಗರಿಕ ಅಭಿನಂದನಾ ಸಮಾರಂಭದಲ್ಲಿ ಜನವೈದ್ಯ ನಮನ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಭಾಗವಹಿಸಿದರು.



ಶ್ರೀ ಹೆಚ್.ಡಿ. ದೇವೇಗೌಡ ಅಭಿನಂದನಾ ಸಮಿತಿಯು ನಗರದಲ್ಲಿ ಹಮ್ಮಿಕೊಂಡಿದ್ದ ಸಮಾರಂಭದಲ್ಲಿ, ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೆ ಶ್ರೀ ಹೆಚ್. ಡಿ. ದೇವೇಗೌಡ ಪ್ರಶಸ್ತಿಯನ್ನು ಪ್ರದಾನ ಮಾಡಿ ಗೌರವಿಸಲಾಯಿತು.



UVCE ಕಾಲೇಜಿನಲ್ಲಿ ಆರ್ಥಿಕವಾಗಿ ಹಿಂದುಳಿದ 100 ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಊಟ ನೀಡುವ ವ್ಯವಸ್ಥೆಗೆ ಶುಭಾರಂಭ ಮಾಡಲಾಯಿತು.



ಇತ್ತೀಚೆಗೆ ಕೊಮ್ಮಸಂದ್ರ ಗ್ರಾಮೀಣ ಶಾಲೆಯ ಮಕ್ಕಳು ಅದಮ್ಯ ಚೇತನದ ಶೂನ್ಯ ತ್ಯಾಜ್ಯ ಅಡುಗೆ ಮನೆಗೆ ಭೇಟಿ ನೀಡಿದರು.



ಇತ್ತೀಚೆಗೆ ಬೆಂಗಳೂರಿನಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರು ಶ್ರೀಮತಿ ಸುಧಾ ಮೂರ್ತಿ ಅವರನ್ನು ಭೇಟಿಯಾದರು.



ಹಲಸೂರಿನ ಲೇಕ್ ವ್ಯೂ ದೇವಾಸ್ಥಾನದ ಆವರಣದಲ್ಲಿ ಅದಮ್ಯ ಚೇತನದಿಂದ ಅನ್ನದಾನ ಸೇವೆ ನಡೆಯುತ್ತಿದೆ.



ಅದಮ್ಯ ಚೇತನದ ಹಸಿರು ಭಾನುವಾರ 499ನೇ ಕಾರ್ಯಕ್ರಮ ಬಿ. ಪಿ. ವಾಡಿಯಾ ರಸ್ತೆಯ ಅನಂತ ವನದಲ್ಲಿ ಯಶಸ್ವಿಯಾಗಿ ಜರುಗಿತು.

# ಅನಂತ ಚಿತ್ರಸಂಪುಟ

ನವಖಾತೆಗಳ ಸರದಾರರಾಗಿದ್ದ ಅನಂತಕುಮಾರರ ರಾಜಕೀಯ ಜೀವನದಲ್ಲಿ ಅವರು ಸಂಸದೀಯ ವ್ಯವಹಾರಗಳ ಖಾತೆಯನ್ನು ನಿರ್ವಹಿಸಿದ ಕಾರ್ಯಕಾಲ ಅತ್ಯಂತ ಮಹತ್ವದ್ದಾಗಿತ್ತು. ಈ ಸಂದರ್ಭದಲ್ಲೇ ಜಿ. ಎಸ್. ಟಿ. ವೈರಿ ಆಸ್ತಿ ವಿಧೇಯಕ ಮುಂತಾದ ಅನೇಕ ಪ್ರಮುಖ ಕಾನೂನುಗಳಿಗೆ ಸಂಸತ್ತಿನ ಅನುಮೋದನೆ ದೊರೆಯಿತು.













